7. ಅಧ್ಯಕ್ಷರ ಅಧಿಕಾರಗಳು.– ಅಧ್ಯಕ್ಷರು ಪ್ರಾಧಿಕಾರದ ಮುಖ್ಯಸ್ಥರಾಗಿರತಕ್ಕದ್ದು ಮತ್ತು,–

(ಎ) ಪ್ರಾಧಿಕಾರದ ಸಭೆಗಳನ್ನು ಕರೆಯತಕ್ಕದ್ದು, ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ನಡೆಸತಕ್ಕದ್ದು;

(ಬಿ) ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಅವರಿಗೆ ಪ್ರದತ್ತವಾದ ಎಲ್ಲಾ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು ಪ್ರದತ್ತವಾದ ಎಲ್ಲಾ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

8. ಮುಖ್ಯ ಕಾರ್ಯನಿರ್ವಹಣಾಧಿಕಾರಿ.– (1) ಸಣ್ಣ ನೀರಾವರಿ ಇಲಾಖೆಯಲ್ಲಿ ಪ್ರಭಾರದಲ್ಲಿರುವ ಸರ್ಕಾರದ ಪ್ರಧಾನ ಕಾರ್ಯದರ್ಶಿ ಅಥವಾ ಸರ್ಕಾರದ ಕಾರ್ಯದರ್ಶಿ ಪ್ರಾಧಿಕಾರದ ಪದನಿಮಿತ್ತ ಮುಖ್ಯಕಾರ್ಯನಿರ್ವಹಣಾಧಿಕಾರಿಯಾಗಿರತಕ್ಕದ್ದು.

(2) ಪ್ರಾಧಿಕಾರದ ಮತ್ತು ಅಧ್ಯಕ್ಷರ ಸಾಮಾನ್ಯ ಅಧಿಕಾರಗಳಿಗೆ ಒಳಪಟ್ಟು, ಈ ಅಧಿನಿಯಮದ ಅಥವಾ ಪ್ರಾಧಿಕಾರಕ್ಕೆ ಕರ್ತವ್ಯವನ್ನು ವಿಧಿಸುವ ಅಥವಾ ಯಾವುವೇ ಅಧಿಕಾರಗಳನ್ನು ಪ್ರದಾನ ಮಾಡುವ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿನ ಎಲ್ಲಾ ಅಧಿಕಾರಗಳು, ಮುಖ್ಯ ಕಾರ್ಯನಿರ್ವಹಣಾಧಿಕಾರಿಯಲ್ಲಿ ನಿಹಿತವಾಗತಕ್ಕದ್ದು ಮತ್ತು ಆತನು,–

(ಎ) ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಅಡಿಯಲ್ಲಿ ಅವನಿಗೆ ವಿಧಿಸಿದ ಅಥವಾ ಪ್ರದಾನ ಮಾಡಿದ ಎಲ್ಲಾ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು ಮತ್ತು ಎಲ್ಲಾ ಅಧಿಕಾರಗಳನ್ನು ಚಲಾಯಿಸತಕ್ಕದ್ದು;

(ಬಿ) ಪ್ರಾಧಿಕಾರದ ನಿರ್ಣಯಗಳನ್ನು ಜಾರಿಗೊಳಿಸತಕ್ಕದ್ದು;

(ಸಿ) ಪ್ರಾಧಿಕಾರದ ಎಲ್ಲಾ ವ್ಯವಹಾರಗಳನ್ನು ನಡೆಸತಕ್ಕದ್ದು;

(ಡಿ) ಸರ್ಕಾರವು ಅಥವಾ ಯಾವುದೇ ಇತರ ಪ್ರಾಧಿಕಾರವು ವಹಿಸಿದ ಪ್ರಾಧಿಕಾರದ ಎಲ್ಲಾ ಯೋಜನೆಗಳನ್ನು ಮತ್ತು ಕಾಮಗಾರಿಗಳನ್ನು ಕಾರ್ಯಗತಗೊಳಿಸುವುದರ ಮೇಲ್ವಿಚಾರಣೆಯನ್ನು ಮತ್ತು ನಿಯಂತ್ರಣವನ್ನು ಮಾಡತಕ್ಕದ್ದು;

(ಇ) ಪ್ರಾಧಿಕಾರದ ನಿಧಿಯಿಂದ ಹಣವನ್ನು ತೆಗೆಯತಕ್ಕದ್ದು ಮತ್ತು ಬಟವಾಡೆ ಮಾಡತಕ್ಕದ್ದು;

(ಎಫ್) ಪ್ರಾಧಿಕಾರದ ಅಧಿಕಾರಿಗಳ ಮತ್ತು ನೌಕರರ ಮೇಲೆ ನಿಯಂತ್ರಣವನ್ನು ಹೊಂದಿರತಕ್ಕದ್ದು;

(ಜಿ) ಪ್ರಾಧಿಕಾರದ ಎಲ್ಲಾ ಅನುಮತಿಗಳಿಗೆ, ಆದೇಶಗಳಿಗೆ, ತೀರ್ಮಾನಗಳಿಗೆ, ನೋಟೀಸುಗಳಿಗೆ ಮತ್ತು ಇತರ ದಸ್ತಾವೇಜುಗಳಿಗೆ ತಾನು ಸಹಿ ಮಾಡಿ ದೃಢೀಕರಿಸತಕ್ಕದ್ದು;

(ಹೆಚ್) ನಿಯಮಿಸಬಹುದಾದಂತೆ ಅಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು ಹಾಗೂ ನಿಯಮಿಸಬಹುದಾದ ಅಂಥ ಇತರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

9. ಪ್ರಾಧಿಕಾರದ ಅಧಿಕಾರಿಗಳು ಮತ್ತು ಇತರ ನೌಕರರು.– (1) ಸರ್ಕಾರವು, ಪ್ರಾಧಿಕಾರದ ಪ್ರಕಾರ್ಯಗಳನ್ನು ದಕ್ಷತೆಯಿಂದ ನೆರವೇರಿಸುವುದಕ್ಕಾಗಿ ಅಗತ್ಯವಾಗಬಹುದಾದ ಅಂಥ ಅಧಿಕಾರಿಗಳನ್ನು ಮತ್ತು ನೌಕರರನ್ನು ಪ್ರಾಧಿಕಾರಕ್ಕೆ ಒದಗಿಸತಕ್ಕದ್ದು.

(2) ಪ್ರಾಧಿಕಾರದ ಉದ್ದೇಶಕ್ಕಾಗಿ ನೇಮಕ ಮಾಡಲಾದ ಅಧಿಕಾರಿಗಳ ಮತ್ತು ಇತರ ನೌಕರರ ನೇಮಕಾತಿ ವಿಧಾನ, ಸಂದಾಯ ಮಾಡತಕ್ಕ ಸಂಬಳಗಳು ಮತ್ತು ಭತ್ಯೆಗಳು ಹಾಗೂ ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳು ಇವುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

10. ಹೆಸರಿಸಲಾದ ಅಧಿಕಾರಿ.– (1) ಪ್ರಾಧಿಕಾರವು, ಕೆರೆಗಳ, ಕೊಳಗಳ, ಸರೋವರಗಳ ರಕ್ಷಣೆ, ಸಂರಕ್ಷಣೆ ಮತ್ತು ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಹಾಗೂ ಯಾವುದೇ ಇತರ ಉದ್ದೇಶಕ್ಕಾಗಿ ಒಂದು ಅಥವಾ ಹೆಚ್ಚು ಕೆರೆಗಳ, ಕೊಳಗಳ, ಸರೋವರಗಳ ಉಸ್ತುವಾರಿಯನ್ನು ವಹಿಸಿಕೊಳ್ಳುವುದಕ್ಕಾಗಿ, ಯಾವೊಬ್ಬ ಅಧಿಕಾರಿಯನ್ನು ಜಿಲ್ಲಾವಾರು ಹೆಸರಿಸಲಾದ ಅಧಿಕಾರಿಯೆಂದು ಹೆಸರಿಸಬಹುದು ಅಥವಾ ನೇಮಕ ಮಾಡಬಹುದು.

(2) ಹೆಸರಿಸಲಾದ ಅಧಿಕಾರಿಗಳು, ಈ ಅಧಿನಿಯಮದ ಅಡಿಯಲ್ಲಿಯ ಅಧಿಕಾರಗಳನ್ನು ಮತ್ತು ಪ್ರಾಧಿಕಾರವು ವಿಶೇಷ ಅಥವಾ ಸಾಮಾನ್ಯ ಆದೇಶದ ಮೂಲಕ ಅವರಿಗೆ ಪ್ರದಾನ ಮಾಡಬಹುದಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(3) ಈ ಅಧಿನಿಯಮದ ಉಪಬಂಧಗಳ ಉಲ್ಲಂಘನೆಗಳ ಬಗ್ಗೆ ಯಾವೊಬ್ಬ ವ್ಯಕ್ತಿಯಿಂದ ದೂರುಗಳನ್ನು ಸ್ವೀಕರಿಸಲು ಹೆಸರಿಸಲಾದ ಅಧಿಕಾರಿಯು ಸಹ ಸಕ್ಷಮನಾಗಿರತಕ್ಕದ್ದು.

11. ಪ್ರಾಧಿಕೃತ ಅಧಿಕಾರಿ.– ಸರ್ಕಾರವು, ರಾಜ್ಯ ಸಿವಿಲ್ ಸೇವೆಗಳ ಗ್ರೂಪ್–ಎ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಒಬ್ಬ ಸರ್ಕಾರಿ ಅಧಿಕಾರಿಯನ್ನು ಅಥವಾ ನೀರಾವರಿ ಇಲಾಖೆಯ ಸಂಬಂಧಪಟ್ಟ ಜಿಲ್ಲೆಯ ಯಾವೊಬ್ಬ ಕಾರ್ಯನಿರ್ವಾಹಕ ಅಭಿಯಂತರನನ್ನು ಪ್ರಾಧಿಕೃತ ಅಧಿಕಾರಿಯಾಗಿ ನೇಮಕ ಮಾಡಬಹುದು, ಆತನು ಈ ಅಧಿನಿಯಮದ ಅಡಿಯಲ್ಲಿನ ಅಧಿಕಾರಗಳನ್ನು ಮತ್ತು ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

ಅಧ್ಯಾಯ – III

ಕೆರೆಗಳ ರಕ್ಷಣೆ

12. ಕೆರೆಗಳಲ್ಲಿ ನಿಷೇಧಿಸಲಾದ ಚಟುವಟಿಕೆಗಳು.– ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಇದಕ್ಕೆ ವಿರುದ್ಧವಾದುದು ಏನೇ ಇದ್ದರೂ, ಯಾವೊಬ್ಬ ವ್ಯಕ್ತಿಯು ಅಥವಾ ಸಂಸ್ಥೆಯು ಅಥವಾ ಸಂಘಟನೆಯು (ನೋಂದಾಯಿತವಾದ ಅಥವಾ ನೋಂದಾಯಿತವಾಗಿಲ್ಲದ) ಅಥವಾ ಕಂಪನಿಯು ಅಥವಾ ಫರ್ಮು ಅಥವಾ ಸಂಘವು, ಸರ್ಕಾರಿ ಇಲಾಖೆಗಳು, ನಿಗಮ ಅಥವಾ ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರವು ಮತ್ತು ಅವುಗಳ ಏಜೆಂಟರು ಅಥವಾ ನೌಕರರು ಅಥವಾ ಅವುಗಳ ಪರವಾಗಿ ಯಾವುದೇ ಸಂಸ್ಥೆಯು,–

(1) ನೀರನ್ನು ಸಂಗ್ರಹಿಸುವುದಕ್ಕಾಗಿ ಅಥವಾ ಹಿಡಿದಿಟ್ಟುಕೊಳ್ಳುವುದಕ್ಕಾಗಿ ಅಥವಾ 5ನೇ ಪ್ರಕರಣದ (9)ನೇ ಖಂಡದಲ್ಲಿ ಹೇಳಿದ ಉದ್ದೇಶದ ಹೊರತಾಗಿ ಇತರ ಯಾವುದೇ ಉದ್ದೇಶಕ್ಕಾಗಿ ಕೆರೆಯನ್ನು ಬಳಸತಕ್ಕದ್ದಲ್ಲ;

(2) ಸರ್ಕಾರದ ಅನುಮತಿ ಇಲ್ಲದೆ ಕೆರೆ ಭೂಮಿಯ ಮೇಲೆ ಯಾವುದೇ ರಚನೆಯನ್ನು ನಿರ್ಮಿಸತಕ್ಕದ್ದಲ್ಲ, ಯಾವುದೇ ಕೆರೆ ಭೂಮಿಯನ್ನು ಅಥವಾ ಅದರ ಯಾವುದೇ ಭಾಗವನ್ನು ಅಧಿಭೋಗಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ ಅಥವಾ ಪ್ರವಾಹದ ವಿರುದ್ಧವಾಗಿ ಮತ್ತು ಪ್ರವಾಹದ ಹರಿವಿನಲ್ಲಿರುವ ಕೆರೆಯಲ್ಲಿ ಅಥವಾ ಕೆರೆಯಿಂದ ನೀರು ಹರಿದು ಬರುತ್ತಿರುವ ಅಥವಾ ನೀರು ಹರಿದು ಹೋಗುತ್ತಿರುವ ಸ್ವಾಭಾವಿಕ ಅಥವಾ ಸಾಮಾನ್ಯವಾಗಿ ನೀರು ಹರಿಯುತ್ತಿರುವುದಕ್ಕೆ ಯಾವುದೇ ಅಡ್ಡಿಯನ್ನು ಉಂಟು ಮಾಡತಕ್ಕದ್ದಲ್ಲ;

(3) ಕೆರೆಯ ಹೊರಗಿನ ಸರಹದ್ದಿನಿಂದ ಮೂವತ್ತು ಮೀಟರುಗಳೊಳಗೆ ಅಕ್ರಮ ಮತ್ತು ಅನಧಿಕೃತವಾಗಿ ಯಾವುದೇ ವಾಣಿಜ್ಯ, ಮನರಂಜನೆ ಅಥವಾ ಕೈಗಾರಿಕಾ ಸಂಕೀರ್ಣಗಳನ್ನು ಅಥವಾ ಮನೆಗಳನ್ನು ಕಟ್ಟತಕ್ಕದ್ದಲ್ಲ ಅಥವಾ ಯಾವುದೇ ಕೈಗಾರಿಕಾ ಚಟುವಟಿಕೆಗಳನ್ನು ನಡೆಸತಕ್ಕದ್ದಲ್ಲ;

(4) ವಾಹನವನ್ನು ಬಳಸಿ ಅಥವಾ ಇತರ ರೀತಿಯಲ್ಲಿ ಕೆರೆಯಲ್ಲಿ ಭಗ್ನಾವಶೇಷಗಳನ್ನು, ಪೌರ ಘನತ್ಯಾಜ್ಯಗಳನ್ನು, ಕೆಸರನ್ನು ಅಥವಾ ಮಣ್ಣನ್ನು ಅಥವಾ ದ್ರವ ತ್ಯಾಜ್ಯಗಳನ್ನು ಅಥವಾ ಯಾವುವೇ ಮಾಲಿನ್ಯಕಾರಕಗಳನ್ನು ರಾಶಿ ಹಾಕತಕ್ಕದ್ದಲ್ಲ;

(5) ನೇರವಾಗಿಯಾಗಲಿ ಅಥವಾ ಪರೋಕ್ಷವಾಗಿಯಾಗಲಿ ಕೆರೆಯಲ್ಲಿ ಸಂಸ್ಕರಿಸದಿರುವ ಚರಂಡಿ ನೀರನ್ನು ಹರಿಬಿಡತಕ್ಕದ್ದಲ್ಲ;

(6) ಸರ್ಕಾರದ ಅನುಮತಿ ಇಲ್ಲದೆ ಕೆರೆಯ ಒಡ್ಡು ಸೇರಿದಂತೆ ಕೆರೆ ಪ್ರದೇಶದೊಳಗೆ ರಸ್ತೆಗಳನ್ನು, ಸೇತುವೆಗಳನ್ನು ಮತ್ತು ಅದೇ ರೀತಿಯ ಇತರ ರಚನೆಗಳನ್ನು ನಿರ್ಮಿಸತಕ್ಕದ್ದಲ್ಲ;

(7) ಒಡ್ಡನ್ನು, ನಿರುಪಯುಕ್ತ ತೂಬಿನ ಮೂಲ ಎತ್ತರವನ್ನು ಕಡಿಮೆ ಮಾಡುವುದು ಒಳಗೊಂಡಂತೆ ನಿರುಪಯುಕ್ತ ತೂಬನ್ನು ಒಡೆದುಹಾಕತಕ್ಕದ್ದಲ್ಲ ಅಥವಾ ಬೇಲಿಯನ್ನು, ಗಡಿಗುರುತು ಕಲ್ಲುಗಳನ್ನು ತೆಗೆದುಹಾಕತಕ್ಕದ್ದಲ್ಲ ಅಥವಾ ಪ್ರಾಧಿಕಾರವು ನಿರ್ಮಿಸಿದ ಭಿತ್ತಿಪತ್ರಗಳನ್ನು ಅಥವಾ ಯಾವುದೇ ಸೂಚನಾ ಫಲಕಗಳನ್ನು ತೆಗೆದು ಹಾಕತಕ್ಕದ್ದಲ್ಲ; ಮತ್ತು

(8) ಕೆರೆಗಳಿಗೆ ನೇರವಾಗಿ ಅಥವಾ ಪರೋಕ್ಷವಾಗಿ ಬಾಧಕವಾದ ಯಾವುದೇ ಕೃತ್ಯವನ್ನು ಮಾಡತಕ್ಕದ್ದಲ್ಲ:

ಪರಂತು, ಈ ಅಧಿನಿಯಮದಲ್ಲಿರುವುದು ಯಾವುದು, ಪ್ರಾಧಿಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದ ಯಾವುದೇ ಕೆರೆಯಿಂದ ಕುಡಿಯುವುದಕ್ಕಾಗಿ ಅಥವಾ ನೀರಾವರಿಗಾಗಿ ಅಥವಾ ಮಾನವ ಬಳಕೆಗಾಗಿನ ಯಾವುದೇ ಉದ್ದೇಶಕ್ಕಾಗಿ ನೀರನ್ನು ತೆಗೆದುಕೊಳ್ಳುವುದನ್ನು ಪ್ರತಿಬಂಧಿಸತಕ್ಕದ್ದಲ್ಲ:

ಮತ್ತು ಪರಂತು, ಈ ಅಧಿನಿಯಮದಲ್ಲಿರುವುದಾವುದೂ, ಸರ್ಕಾರವು ಮತ್ತು ಪ್ರಾಧಿಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದ ಯಾವುದೇ ಕೆರೆಯಲ್ಲಿ ಅದರ ಲೈಸನ್ಸ್‌ದಾರನು, ಗೇಣಿದಾರನು ಅಥವಾ ಗುತ್ತಿಗೆದಾರನು (ಕೆರೆಯ ಜಲ ಜೀವ ಪರಿಸರ ವ್ಯವಸ್ಥೆಗೆ ಅಪಾಯಕಾರಿಯಾದ ಅಥವಾ ಉಪದ್ರವಕಾರಿಯಾದ ಮೀನಿನ ಹೊರತಾಗಿ) ಮೀನು ಮರಿಗಳ ಸಂಗ್ರಹಣೆಯನ್ನು ಮತ್ತು ಮೀನುಗಾರಿಕೆ ಅಭಿವೃದ್ಧಿಯನ್ನು ಪ್ರತಿಬಂಧಿಸತಕ್ಕದ್ದಲ್ಲ.

13. ಕೆರೆಗಳ ರಕ್ಷಣೆ.– (1) ಪ್ರಾಧಿಕಾರವು, ಯಾವುದೇ ಕೆರೆಯ ಅಭಿರಕ್ಷಕನಾಗಿರುವ ಅಥವಾ ಅದರ ನಿಯಂತ್ರಣವನ್ನು ಹೊಂದಿರುವ, ಸರ್ಕಾರದ ಅಥವಾ ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರದ ಯಾವೊಬ್ಬ ಅಧಿಕಾರಿಗೆ ಕೆರೆಯ ಸರಹದ್ದುಗಳನ್ನು ಖಾಯಂ ಆಗಿ ಗುರುತಿಸಲು ಮತ್ತು ಅವಶ್ಯವಾಗಬಹುದಾದ ಅಂಥ ಇತರ ಕ್ರಮಗಳನ್ನು ಕೈಗೊಳ್ಳುವುದಕ್ಕೆ ನಿರ್ದೇಶಿಸಬಹುದು.

(2) ಪ್ರಾಧಿಕಾರವು, ಯಾವುದೇ ಕೆರೆಯ ಅಭಿರಕ್ಷಕನಾಗಿರುವ ಅಥವಾ ಅದರ ನಿಯಂತ್ರಣವನ್ನು ಹೊಂದಿರುವ, ಸರ್ಕಾರಿ ಇಲಾಖೆಯ ಅಥವಾ ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರದ ಯಾವೊಬ್ಬ ಅಧಿಕಾರಿಗೆ, ಅಂಥ ಕೆರೆಯ ಒತ್ತುವರಿಯನ್ನು ಅಥವಾ ಅನಧಿಕೃತ ಅಧಿಭೋಗದಾರಿಕೆಯನ್ನು ತೆರವುಗೊಳಿಸುವುದಕ್ಕೆ ಮತ್ತು ಅದು ಪುನರಾವರ್ತನೆಯಾಗುವುದನ್ನು ಪ್ರತಿಬಂಧಿಸುವುದಕ್ಕಾಗಿ ಅವಶ್ಯಕವಾದ ಮತ್ತು ಯುಕ್ತವಾದಂಥ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಸಾಮಾನ್ಯ ಅಥವಾ ನಿರ್ದಿಷ್ಟ ನಿರ್ದೇಶನಗಳನ್ನು ನೀಡಬಹುದು.

(3) ಪ್ರಾಧಿಕಾರವು, ಯಾವುದೇ ಕೆರೆಯನ್ನು ಒಂದು ಪಾರಂಪರಿಕ ತಾಣವೆಂದು ಅಥವಾ ಜೈವಿಕ ಸಂರಕ್ಷಣಾ ತಾಣವೆಂದು ಅಥವಾ ರಕ್ಷಿತ ತಾಣವೆಂದು ಅಥವಾ ಅದರ ಐತಿಹಾಸಿಕ, ಜೀವಿಶಾಸ್ತ್ರ ಅಥವಾ ಪರಿಸರದ ಮಹತ್ವವನ್ನು ಗಮನಿಸಿ ಯಾವುದೇ ವಿಶೇಷ ಉದ್ದೇಶಕ್ಕಾಗಿ ಮೀಸಲಿಟ್ಟ ತಾಣವೆಂದು ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದು ಮತ್ತು ಯಾವುದೇ ಇತರ ಪರ್ಯಾಯ ಬಳಕೆಯಾಗುವುದನ್ನು ತಡೆಯಬಹುದು ಹಾಗೂ ಅದರ ಉಪಯೋಗ ಯಾವುದಾದರೂ ಇದ್ದರೆ, ಅದನ್ನು ನಿರ್ದಿಷ್ಟಪಡಿಸಬಹುದು.

14. ಸ್ವಾಧೀನಪಡಿಸಿಕೊಳ್ಳುವ ಅಧಿಕಾರಗಳು.– (1) ಮೇಲಿನ 12ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧವು ಘಟಿಸಿದೆಯೆಂದು ನಂಬಲು ಕಾರಣವಿದ್ದಾಗ ಯಾವುದೇ ಅಂಥ ಅಪರಾಧವು ಘಟಿಸುವಲ್ಲಿ ಬಳಸಿದ ಯಾವುದೇ ಸಾಧನ, ಸಲಕರಣೆ, ಯಂತ್ರೋಪಕರಣ, ಉಪಕರಣ, ಸಾಧನಸಾಮಗ್ರಿ, ದೋಣಿ, ವಾಹನ ಅಥವಾ ಇತರ ಯಾವುದೇ ಇತರ ಸಾಮಾಗ್ರಿ ಅಥವಾ ವಸ್ತುವನ್ನು, ಹೆಸರಿಸಲಾದ ಅಧಿಕಾರಿಯು ಅಥವಾ ಈ ಬಗ್ಗೆ ಪ್ರಾಧಿಕಾರವು ಅಧಿಕೃತಗೊಳಿಸಿದ ಯಾವೊಬ್ಬ ಇತರ ಅಧಿಕಾರಿಯು (ಇದರಲ್ಲಿ ಇನ್ನು ಮುಂದೆ ಅಧಿಕೃತಗೊಳಿಸಿದ ಅಧಿಕಾರಿ ಎಂದು ಉಲ್ಲೇಖಿಸಲಾಗಿದೆ) ಸ್ವಾಧೀನಪಡಿಸಿಕೊಳ್ಳಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಯಾವುದೇ ಸ್ವತ್ತನ್ನು, ವಾಹನವನ್ನು, ಸಾಮಗ್ರಿಯನ್ನು ಅಥವಾ ವಸ್ತುವನ್ನು ಸ್ವಾಧೀನಪಡಿಸಿಕೊಳ್ಳುವ ಹೆಸರಿಸಲಾದ ಅಧಿಕಾರಿ ಅಥವಾ ಅಧಿಕೃತಗೊಳಿಸಿದ ಅಧಿಕಾರಿಯು, ಹಾಗೆ ಅವುಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆಯೆಂದು ತಿಳಿಸುವ ಗುರುತನ್ನು ಅವುಗಳ ಮೇಲೆ ಹಾಕತಕ್ಕದ್ದು ಮತ್ತು ಸಾಧ್ಯವಾದಷ್ಟು ಬೇಗನೆ, ಸ್ವಾಧೀನಪಡಿಸಿಕೊಳ್ಳಲಾದುದಕ್ಕೆ ಸಂಬಂಧಿಸಿದಂತೆ ಅಪರಾಧದ ವಿಚಾರಣೆ ನಡೆಸಲು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಮ್ಯಾಜಿಸ್ಟ್ರೇಟರಿಗೆ ಹಾಗೆ ಸ್ವಾಧೀನಪಡಿಸಿಕೊಂಡ ಬಗ್ಗೆ ವರದಿಯನ್ನು ಮಾಡತಕ್ಕದ್ದು. ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆಯು ದಂಡ ಪ್ರಕ್ರಿಯೆ ಸಂಹಿತೆ, 1973ರಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಇರತಕ್ಕದ್ದು:

ಪರಂತು, ಸ್ವಾಧೀನಪಡಿಸಿಕೊಂಡ ಸ್ವತ್ತು, ವಾಹನ, ಸಾಮಗ್ರಿ ಅಥವಾ ವಸ್ತು ಇವುಗಳು ಕೇಂದ್ರ ಅಥವಾ ರಾಜ್ಯ ಸರ್ಕಾರಕ್ಕೆ ಅಥವಾ ಸ್ಥಳೀಯ ಅಥವಾ ಇತರ ಪ್ರಾಧಿಕಾರಕ್ಕೆ ಸೇರಿದ್ದೆಂದು ನಂಬಲಾಗಿದ್ದರೆ, ಅಥವಾ ಅಪರಾಧಿಯು ಯಾರೆಂಬುದು ತಿಳಿಯದಿದ್ದರೆ, ಹೆಸರಿಸಲಾದ ಅಧಿಕಾರಿಯು ಅಥವಾ ಅಧಿಕೃತಗೊಳಿಸಿದ ಅಧಿಕಾರಿಯು ಪ್ರಾಧಿಕೃತ ಅಧಿಕಾರಿಗೆ ವರದಿ ಮಾಡತಕ್ಕದ್ದು.

15. 14ನೇ ಪ್ರಕರಣದ ಅಡಿಯಲ್ಲಿ ಸ್ವಾಧೀನಪಡಿಸಿಕೊಂಡ ಸ್ವತ್ತನ್ನು ಬಿಡುಗಡೆ ಮಾಡುವುದಕ್ಕೆ ಅಧಿಕಾರ.– ಸ್ವಾಧೀನಪಡಿಸಿಕೊಂಡ ಸ್ವತ್ತು, ಮ್ಯಾಜಿಸ್ಟ್ರೇಟರ ಮುಂದೆ ಅಥವಾ ಸಂದರ್ಭಾನುಸಾರವಾಗಿ ಪ್ರಾಧಿಕೃತ ಅಧಿಕಾರಿಯ ಮುಂದೆ ಅನುಕೂಲಕರವಾಗಿ ಹಾಜರುಪಡಿಸಲು ಸಾಧ್ಯವಿಲ್ಲದಿದ್ದರೆ, ಸ್ವತ್ತಿನ ಮಾಲೀಕನು ಬ್ಯಾಂಕ್ ಗ್ಯಾರಂಟಿಯನ್ನು ಮತ್ತು ಹಾಗೆ ಬಿಡಗಡೆ ಮಾಡಲಾದ ಸ್ವತ್ತನ್ನು ಅಗತ್ಯಪಡಿಸಿದಾಗಲೆಲ್ಲಾ, ಸ್ವಾಧೀನಪಡಿಸಿಕೊಳ್ಳಲಾದುದಕ್ಕೆ ಸಂಬಂಧಿಸಿದಂತೆ ಅಪರಾಧದ ವಿಚಾರಣೆ ನಡೆಸಲು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಮ್ಯಾಜಿಸ್ಟ್ರೇಟರ ಮುಂದೆ ಅಥವಾ ಪ್ರಾಧಿಕೃತ ಅಧಿಕಾರಿಯ ಮುಂದೆ ಹಾಜರುಪಡಿಸುವ ಬಗ್ಗೆ ಒಂದು ಮುಚ್ಚಳಿಕೆ ಬಂಧ ಪತ್ರವನ್ನು ಬರೆದುಕೊಟ್ಟ ಮೇಲೆ, ಪ್ರಾಧಿಕೃತ ಅಧಿಕಾರಿಯು ಅದನ್ನು ಮಾಲೀಕನಿಗೆ ಬಿಡುಗಡೆ ಮಾಡಬಹುದು.

16. ಪ್ರಾಧಿಕೃತ ಅಧಿಕಾರಿಯು ವಶಪಡಿಸಿಕೊಳ್ಳುವುದು.– (1) 14ನೇ ಪ್ರಕರಣದ ಅಡಿಯಲ್ಲಿ ಸ್ವತ್ತನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ, ಹೆಸರಿಸಲಾದ ಅಧಿಕಾರಿಯು ಅಥವಾ ಅಧಿಕೃತಗೊಳಿಸಿದ ಅಧಿಕಾರಿಯು ಯಾವುದೇ ಅನುಚಿತ ವಿಳಂಬವಿಲ್ಲದೆ ಪ್ರಾಧಿಕೃತ ಅಧಿಕಾರಿಯ ಮುಂದೆ ಸ್ವತ್ತನ್ನು ಹಾಜರುಪಡಿಸತಕ್ಕದ್ದು.

(2) ಸ್ವಾಧೀನಪಡಿಸಿಕೊಂಡ ಯಾವುದೇ ಸ್ವತ್ತನ್ನು ಪ್ರಾಧಿಕೃತ ಅಧಿಕಾರಿಯ ಮುಂದೆ ಹಾಜರುಪಡಿಸಿದಾಗ ಮತ್ತು ಅಂಥ ಸ್ವತ್ತನ್ನು ಉಪಯೋಗಿಸಿಕೊಂಡು 12ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧ ಮಾಡಲಾಗಿದೆ ಎಂದು ಅವನಿಗೆ ಮನವರಿಕೆಯಾದರೆ ಅಂಥ ಅಪರಾಧ ಘಟಿಸಿದುದಕ್ಕಾಗಿ ಪ್ರಾಸಿಕ್ಯೂಷನ್‍ನ್ನು ಹೂಡಿರಲಿ ಅಥವಾ ಹೂಡಿಲ್ಲದಿರಲಿ, ಪ್ರಾಧಿಕೃತ ಅಧಿಕಾರಿಯು, ಹಾಗೆ ಸ್ವಾಧೀನಕ್ಕೆ ತೆಗೆದುಕೊಂಡ ಸ್ವತ್ತನ್ನು ವಶಪಡಿಸಿಕೊಳ್ಳುವುದಕ್ಕೆ ಆದೇಶ ಮಾಡಬಹುದು.

(3) (2)ನೇ ಉಪಪ್ರಕರಣದ ಅಡಿಯಲ್ಲಿ ವಶಪಡಿಸಿಕೊಳ್ಳುವ ಆದೇಶವನ್ನು ಹೊರಡಿಸುವ ಪ್ರಾಧಿಕೃತ ಅಧಿಕಾರಿಯು, ವಶಪಡಿಸಿಕೊಂಡ ಸ್ವತ್ತನ್ನು ಅಥವಾ ಅದರ ಭಾಗವನ್ನು ಸಾರ್ವಜನಿಕ ಹರಾಜಿನಲ್ಲಿ ಮಾರಾಟಮಾಡುವುದು ಸಾರ್ವಜನಿಕ ಹಿತಾಸ್ತಕಿಯಲ್ಲಿ ಯುಕ್ತವಾಗಿದೆ ಎಂದು ಅಭಿಪ್ರಾಯ ಪಟ್ಟರೆ ಅವನು ಹಾಗೆ ಮಾರಾಟಮಾಡುವುದಕ್ಕೆ ಆದೇಶ ಮಾಡಬಹುದು.

(4) ಮೇಲೆ ಹೇಳಿದಂತೆ ಯಾವುದೇ ವಶಪಡಿಸಿಕೊಂಡ ಸ್ವತ್ತನ್ನು ಮಾರಾಟ ಮಾಡಿದಲ್ಲಿ, ಅದರ ಉತ್ಪನ್ನವನ್ನು, ಅಂಥ ಹರಾಜಿನ ವೆಚ್ಚಗಳನ್ನು ಅಥವಾ ಅದಕ್ಕೆ ಸಂಬಂಧಪಟ್ಟ ಇತರ ಪ್ರಾಸಂಗಿಕ ವೆಚ್ಚಗಳನ್ನು ಅದರಿಂದ ಕಡಿತ ಮಾಡಿಕೊಂಡು, (2)ನೇ ಉಪಪ್ರಕರಣದ ಅಡಿಯಲ್ಲಿ ವಶಪಡಿಸಿಕೊಳ್ಳಲು ಮಾಡಿದ ಆದೇಶವನ್ನು 17 ಅಥವಾ 18ನೇ ಪ್ರಕರಣದ ಅಡಿಯಲ್ಲಿಯ ಆದೇಶದ ಮೂಲಕ ತಳ್ಳಿಹಾಕಿದಲ್ಲಿ ಅಥವಾ ರದ್ದುಪಡಿಸಿದಲ್ಲಿ, ಅದರ ಮಾಲೀಕನಿಗೆ ಅಥವಾ ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ, ಅದನ್ನು ಯಾರಿಂದ ವಶಪಡಿಸಿಕೊಳ್ಳಲಾಯಿತೋ ಆ ವ್ಯಕ್ತಿಗೆ ಸಂದಾಯ ಮಾಡತಕ್ಕದ್ದು.

17. ವಶಪಡಿಸಿಕೊಳ್ಳುವುದಕ್ಕೆ ಮೊದಲು ಕಾರಣ ಕೇಳಿ ನೋಟೀಸು ನೀಡುವುದು.– (1) ಯಾವುದೇ ಸಾಧನ, ಸಲಕರಣೆ, ಯಂತ್ರೋಪಕರಣ, ಉಪಕರಣ, ಸಾಧನಸಾಮಗ್ರಿ, ದೋಣಿ, ವಾಹನ ಅಥವಾ ಇತರ ಯಾವುದೇ ಸ್ವತ್ತನ್ನು ವಶಪಡಿಸಿಕೊಳ್ಳುವ ಯಾವುದೇ ಆದೇಶವನ್ನು, ಅದನ್ನು ಯಾರಿಂದ ವಶಪಡಿಸಿಕೊಳ್ಳಲಾಯಿತೋ ಆ ವ್ಯಕ್ತಿಗೆ ಲಿಖಿತ ನೋಟೀಸನ್ನು ಕೊಟ್ಟ ಹೊರತು ಮತ್ತು ಆತನ ಆಕ್ಷೇಪಣೆಗಳು, ಯಾವುದಾದರೂ ಇದ್ದರೆ, ಅವುಗಳನ್ನು ಪರಿಗಣಿಸಿದ ತರುವಾಯದ ಹೊರತು, 14ನೇ ಪ್ರಕರಣದ ಅಡಿಯಲ್ಲಿ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ:

ಪರಂತು, ಮೋಟಾರು ವಾಹನವನ್ನು ವಶಪಡಿಸಿಕೊಳ್ಳುವ ಯಾವುದೇ ಆದೇಶವನ್ನು, ಅದರ ನೋಂದಾಯಿತ ಮಾಲೀಕರಿಗೆ ಲಿಖಿತ ನೋಟೀಸನ್ನು ಕೊಡುವುದು ಕಾರ್ಯಸಾಧ್ಯವೆಂದು ಪ್ರಾಧಿಕೃತ ಅಧಿಕಾರಿಯು ಅಭಿಪ್ರಾಯಪಟ್ಟರೆ, ಹಾಗೆ ನೋಟೀಸನ್ನು ಕೊಟ್ಟ ತರುವಾಯದ ಹೊರತು ಮತ್ತು ಆತನ ಆಕ್ಷೇಪಣೆಗಳು, ಯಾವುದಾದರೂ ಇದ್ದರೆ, ಅವುಗಳನ್ನು ಪರಿಗಣಿಸಿದ ಹೊರತು, ಮಾಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, ಯಾವುದೇ ಸಾಧನ, ಸಲಕರಣೆ, ಯಂತ್ರೋಪಕರಣ, ಉಪಕರಣ, ಸಾಧನಸಾಮಗ್ರಿ, ದೋಣಿ, ವಾಹನ ಅಥವಾ ಇತರ ಯಾವುದೇ ಸ್ವತ್ತನ್ನು ವಶಪಡಿಸಿಕೊಳ್ಳುವ ಯಾವುದೇ ಆದೇಶವನ್ನು ಅಂಥ ಸಾಧನದ, ಸಲಕರಣೆಯ, ಯಂತ್ರೋಪಕರಣದ, ಉಪಕರಣದ, ಸಾಧನಸಾಮಗ್ರಿಯ, ದೋಣಿಯ, ವಾಹನದ ಅಥವಾ ಇತರ ಯಾವುದೇ ಸ್ವತ್ತಿನ ಮಾಲೀಕನು ಅದನ್ನು ಸ್ವತ: ಮಾಲೀಕನ, ಅವನ ಏಜೆಂಟನ, ಯಾರಾದರೂ ಇದ್ದಲ್ಲಿ, ಮತ್ತು ಸಾಧನ, ಸಲಕರಣೆ, ಯಂತ್ರೋಪಕರಣ, ಉಪಕರಣ, ಸಾಧನಸಾಮಗ್ರಿ, ದೋಣಿ, ವಾಹನ ಅಥವಾ ಇತರ ಯಾವುದೇ ಸ್ವತ್ತಿನ ಪ್ರಭಾರದಲ್ಲಿರುವ ವ್ಯಕ್ತಿಯ ತಿಳುವಳಿಕೆಗೆ ಬಾರದೆ ಅಥವಾ ಸಮ್ಮತಿಯಿಂದ ಬಳಸಲಾಗಿದೆ ಎಂದು ಮತ್ತು ಅವರಲ್ಲಿ ಪ್ರತಿಯೊಬ್ಬರು ಅಂತಹ ಬಳಕೆಗೆ ಪ್ರತಿಯಾಗಿ ಎಲ್ಲಾ ಸೂಕ್ತ ಮತ್ತು ಅವಶ್ಯಕ ಮುಂಜಾಗ್ರತೆಗಳನ್ನು ತೆಗೆದುಕೊಂಡಿದ್ದಾರೆಂದು ಪ್ರಾಧಿಕೃತ ಅಧಿಕಾರಿಗೆ ಮನವರಿಕೆಯಾಗುವಂತೆ ರುಜುವಾತುಪಡಿಸಿದರೆ ಅಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

18. ಪುನರೀಕ್ಷಣೆ.– ಮುಖ್ಯ ಕಾರ್ಯನಿರ್ವಹಣಾಧಿಕಾರಿಯು, 16ನೇ ಪ್ರಕರಣದ ಅಡಿಯಲ್ಲಿ ಪ್ರಾಧಿಕೃತ ಅಧಿಕಾರಿಯ ಆದೇಶದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯು ಮೀರುವುದಕ್ಕೆ ಮೊದಲು, ಆ ಆದೇಶದ ದಾಖಲೆಗಳನ್ನು ಸ್ವತ: ತರಿಸಿಕೊಳ್ಳಬಹುದು ಮತ್ತು ಪರಿಶೀಲಿಸಬಹುದು ಹಾಗೂ ಆತನು ಸೂಕ್ತವೆಂದು ಭಾವಿಸುವ ಅಂಥ ವಿಚಾರಣೆಯನ್ನು ಮಾಡಬಹುದು ಅಥವಾ ಅಂಥ ವಿಚಾರಣೆಯನ್ನು ಮಾಡುವುದಕ್ಕೆ ಕಾರಣರಾಗಬಹುದು ಮತ್ತು ಅಂಥ ಆದೇಶಗಳನ್ನು ಹೊರಡಿಸಬಹುದು.

19. ಅಪೀಲು.– (1) 16ನೇ ಪ್ರಕರಣ ಅಥವಾ 18ನೇ ಪ್ರಕರಣದ ಅಡಿಯಲ್ಲಿ ಹೊರಡಿಸಿದ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು, ಅಂಥ ಆದೇಶವು ಆತನಿಗೆ ತಲುಪಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ, ಯಾವ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಬೇಕಾಗಿದೆಯೋ ಆ ಆದೇಶದಲ್ಲಿ ಯಾವ ಸ್ವತ್ತನ್ನು ಅಭಿಗ್ರಹಿಸಲಾಗಿದೆಯೋ ಅಂಥ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವಂಥ ಸೆಷನ್ಸ್ ನ್ಯಾಯಾಧೀಶರಿಗೆ ಮೇಲ್ಮನವಿಯನ್ನು ಸಲ್ಲಿಸಬಹುದು ಮತ್ತು ಸೆಷನ್ಸ್ ನ್ಯಾಯಾಧೀಶರು, ಅಪೀಲುದಾರ ಮತ್ತು ಪ್ರಾಧಿಕೃತ ಅಧಿಕಾರಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳುವುದಕ್ಕೆ ಅವಕಾಶವನ್ನು ನೀಡಿದ ತರುವಾಯ, ಅಂಥ ಆದೇಶವನ್ನು ಸ್ಥಿರೀಕರಿಸಲು, ಮಾರ್ಪಡಿಸಲು ಅಥವಾ ರದ್ದುಪಡಿಸಲು ಅವಶ್ಯಕವೆಂದು ಭಾವಿಸಬಹುದಾದ ಅಂಥ ಆದೇಶವನ್ನು ಹೊರಡಿಸತಕ್ಕದ್ದು.

(2) ಈ ಪ್ರಕರಣದ ಅಡಿಯಲ್ಲಿ ಸೆಷನ್ಸ್ ನ್ಯಾಯಾಧೀಶರ ಆದೇಶವು ಅಂತಿಮವಾಗಿರತಕ್ಕದ್ದು ಮತ್ತು ಯಾವುದೇ ನ್ಯಾಯಾಲಯದಲ್ಲಿ ಅದನ್ನು ಪ್ರಶ್ನಿಸತಕ್ಕದ್ದಲ್ಲ.

20. ಇತರ ಶಿಕ್ಷೆಗಳೊಂದಿಗೆ ಹಸ್ತಕ್ಷೇಪ ಮಾಡದ ಮುಟ್ಟುಗೋಲಿನ ಆದೇಶ.– 15 ಅಥವಾ 16 ಅಥವಾ 17 ಅಥವಾ 18ನೇ ಪ್ರಕರಣದ ಅಡಿಯಲ್ಲಿಯ ಯಾವುದೇ ಮುಟ್ಟುಗೋಲಿನ ಆದೇಶವು, ಈ ಅಧಿನಿಯಮದಡಿಯಲ್ಲಿ, ಅದರ ಮೂಲಕ ಕ್ರಮ ಜರುಗಿಸುವುದಕ್ಕೆ ಬದ್ಧನಾಗಿರುವ ವ್ಯಕ್ತಿಗೆ ಶಿಕ್ಷೆಯ ವಿಧಿಸುವಿಕೆಯನ್ನು ಪ್ರತಿಬಂಧಿಸತಕ್ಕದ್ದಲ್ಲ.

21. ಸ್ವತ್ತು ಸರ್ಕಾರದಲ್ಲಿ ನಿಹಿತವಾದಾಗ ಮುಟ್ಟುಗೋಲು.– 15 ಅಥವಾ 16 ಅಥವಾ 17 ಅಥವಾ 18ನೇ ಪ್ರಕರಣದ ಅಡಿಯಲ್ಲಿ ಯಾವುದೇ ಸ್ವತ್ತಿನ ಮುಟ್ಟುಗೋಲಿಗಾಗಿ ಆದೇಶವನ್ನು ಹೊರಡಿಸಿದಾಗ ಮತ್ತು ಅಂಥ ಆದೇಶವು, ಅಂಥ ಸ್ವತ್ತಿನ ಪೂರ್ಣ ಅಥವಾ ಅದರ ಭಾಗದ ಸಂಬಂಧದಲ್ಲಿ ಅಂತಿಮವಾದಾಗ, ಅಂಥ ಸ್ವತ್ತು ಅಥವಾ ಸಂದರ್ಭಾನುಸಾರವಾಗಿ ಅದರ ಭಾಗವು (ಅಥವಾ 16ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ಇದನ್ನು ಮಾರಾಟ ಮಾಡಿದಲ್ಲಿ ಅದರ ಉತ್ಪನ್ನವು) ಅದರ ಎಲ್ಲಾ ಋಣಭಾರ ಮುಕ್ತವಾಗಿ ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು:

ಪರಂತು, ಯಾವೊಬ್ಬ ವ್ಯಕ್ತಿಗೆ ತನ್ನ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ನೀಡದ ಹೊರತು ಈ ಪ್ರಕರಣದಡಿಯಲ್ಲಿ ಅಂಥ ಯಾವುದೇ ಪ್ರತಿಕೂಲ ಪ್ರಭಾವದ ಆದೇಶವನ್ನು ಹೊರಡಿಸತಕ್ಕದ್ದಲ್ಲ.

22. ಒತ್ತುವರಿಯನ್ನು ತೆರವುಗೊಳಿಸುವುದಕ್ಕೆ ಅಧಿಕಾರ.– (1) ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವಿಕೆ) ಅಧಿನಿಯಮ, 1974ರಲ್ಲಿ (1974ರ ಕರ್ನಾಟಕ ಅಧಿನಿಯಮ 32) ಏನೇ ಒಳಗೊಂಡಿದ್ದರೂ, ಯಾವುದೇ ಕೆರೆಯ ಭೂಮಿ ಅಥವಾ ಅದರ ಭಾಗವನ್ನು ಅನಧಿಕೃತವಾಗಿ ಅಧಿಭೋಗದಲ್ಲಿಟ್ಟುಕೊಂಡಿದ್ದಾನೆಂದು ಕಂಡುಬರುವಂಥ ಯಾವೊಬ್ಬ ವ್ಯಕ್ತಿಯನ್ನು, ಈ ಅಧಿನಿಯಮದ ಯಾವುದೇ ಇತರ ಉಪಬಂಧಗಳ ಅಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಅಡಿಯಲ್ಲಿ ಆತನ ವಿರುದ್ಧ ಕೈಗೊಳ್ಳಬಹುದಾದ ಅಂಥ ಯಾವುದೇ ಇತರ ಕ್ರಮಕ್ಕೆ ಬಾಧಕವಾಗದಂತೆ, ಹೆಸರಿಸಲಾದ ಅಧಿಕಾರಿಯು ಅಥವಾ ಈ ಸಂಬಂಧದಲ್ಲಿ ಪ್ರಾಧಿಕಾರದಿಂದ ಪ್ರಾಧಿಕೃತನಾದ ಯಾವೊಬ್ಬ ಇತರ ಅಧಿಕಾರಿಯು ಕ್ಷಿಪ್ರವಾಗಿ ಹೊರಹಾಕತಕ್ಕದ್ದು:

ಪರಂತು, ಯಾವೊಬ್ಬ ವ್ಯಕ್ತಿಯನ್ನು, ಆತನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡದ ಹೊರತು, ಈ ಉಪಪ್ರಕರಣದಡಿಯಲ್ಲಿ ಹೊರಹಾಕತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಿದ ಹೊರಹಾಕುವ ಪ್ರತೀ ಆದೇಶವು ಲಿಖಿತದಲ್ಲಿರತಕ್ಕದ್ದು ಮತ್ತು ಕೆರೆಯ ಭೂಮಿಯನ್ನು ಅನಧಿಕೃತವಾಗಿ ಅಧಿಭೋಗಿಸುತ್ತಿರುವ ವ್ಯಕ್ತಿಗೆ ಅದರ ಪ್ರತಿಯನ್ನು ನೀಡುವ ಅಥವಾ ಒಪ್ಪಿಸುವ ಮೂಲಕ ಅಥವಾ ನೋಂದಾಯಿತ ಅಂಚೆಯ ಮೂಲಕ ಅದರ ಪ್ರತಿಯನ್ನು ರವಾನಿಸುವ ಮೂಲಕ ಅಥವಾ ಆತನು, ಇದನ್ನು ಸ್ವೀಕರಿಸಲು ನಿರಾಕರಿಸಿದಲ್ಲಿ ಅಥವಾ ಜಾರಿಯನ್ನು ತಪ್ಪಿಸಿದಲ್ಲಿ, ಆತನ ಅಧಿಭೋಗದಲ್ಲಿರುವ ಸ್ವತ್ತಿನ ಪ್ರಮುಖ ಭಾಗದ ಮೇಲೆ ಅಂಟಿಸುವ ಮೂಲಕ ಅಥವಾ ಆ ಪ್ರದೇಶದಲ್ಲಿ ವ್ಯಾಪಕ ಪ್ರಸಾರದಲ್ಲಿರುವ ವೃತ್ತ ಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕ ಜಾರಿಮಾಡತಕ್ಕದ್ದು.

(3) ಕೆರೆಯ ಭೂಮಿಯಲ್ಲಿ ಬೆಳೆದಿರುವ ಮರಗಳನ್ನು ಒಳಗೊಂಡಂತೆ ಯಾವುದೇ ಬೆಳೆಯನ್ನು ಮತ್ತು ಅನಧಿಕೃತ ಅಧಿಭೋಗದಾರನು ಅದರ ಮೇಲೆ ನಿರ್ಮಿಸಿರುವ ಯಾವುದೇ ಕಟ್ಟಡಗಳು ಅಥವಾ ಇತರ ನಿರ್ಮಿತಿಗಳನ್ನು, (1)ನೇ ಉಪಪ್ರಕರಣದಲ್ಲಿ ಹೊರಹಾಕುವಿಕೆಯ ಆದೇಶವನ್ನು ಹೊರಡಿಸಿದ ಮೂವತ್ತು ದಿನಗಳೊಳಗೆ ಆತನು ತೆರವುಗೊಳಿಸದಿದ್ದಲ್ಲಿ, ಮುಟ್ಟುಗೋಲು ಹಾಕಿಕೊಳ್ಳಲು ಅಥವಾ ಕ್ಷಿಪ್ರವಾಗಿ ತೆರವುಗೊಳಿಸಲು ಬದ್ಧವಾಗಿರತಕ್ಕದ್ದು.

(4) (3)ನೇ ಉಪಪ್ರಕರಣದ ಅಡಿಯಲ್ಲಿ ಮುಟ್ಟುಗೋಲನ್ನು ಹಾಕಿಕೊಂಡ ಯಾವುದೇ ಸ್ವತ್ತು ಪ್ರಾಧಿಕಾರದಲ್ಲಿ ನಿಹಿತವಾಗಿರತಕ್ಕದ್ದು ಮತ್ತು ಯುಕ್ತವೆಂದು ಭಾವಿಸಬಹುದಾದ ಅಂಥ ರೀತಿಯಲ್ಲಿ ಇದನ್ನು ವಿಲೆ ಮಾಡಬಹುದು ಮತ್ತು ಯಾವುದೇ ಬೆಳೆ, ಮರಗಳು, ಕಟ್ಟಡಗಳು ಅಥವಾ ಇತರ ನಿರ್ಮಿತಿಗಳನ್ನು ತೆಗೆದುಹಾಕುವುದಕ್ಕಾಗಿನ ಖರ್ಚನ್ನು ಮತ್ತು ಕೆರೆಯನ್ನು ಅದರ ಪೂರ್ವಸ್ಥಿತಿಗೆ ತರಲು ಭರಿಸುವ ವೆಚ್ಚವನ್ನು, ಹೊರಹಾಕಿದ ವ್ಯಕ್ತಿಯಿಂದ ಭೂ ಕಂದಾಯದ ಬಾಕಿಯಂತೆ ಅಥವಾ ನಿಯಮಿಸಬಹುದಾದ ಅಂಥ ಯಾವುದೇ ಇತರ ರೀತಿಯಲ್ಲಿ ವಸೂಲಿ ಮಾಡತಕ್ಕದ್ದು.

(5) ಹೆಸರಿಸಲಾದ ಅಧಿಕಾರಿಯ ಅಥವಾ (1)ನೇ ಉಪಪ್ರಕರಣದಡಿಯಲ್ಲಿ ಪ್ರಾಧಿಕಾರವು ಪ್ರಾಧಿಕೃತಗೊಳಿಸಿದ ಯಾವೊಬ್ಬ ಇತರ ಅಧಿಕಾರಿಯ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು, ಆದೇಶದ ದಿನಾಂಕದಿಂದ ಮೂವತ್ತು ದಿನಗಳ ಒಳಗೆ, ಅಂಥ ಆದೇಶದ ವಿರುದ್ಧ ಅಪೀಲನ್ನು, ನಿಯಮಿಸಬಹುದಾದಂಥ ರೀತಿಯಲ್ಲಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಿಗೆ ಸಲ್ಲಿಸಬಹುದು ಮತ್ತು (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಿದ ಆದೇಶವು, ಅಂಥ ಅಪೀಲಿನಲ್ಲಿನ ನಿರ್ಣಯಕ್ಕೆ ಒಳಪಟ್ಟು ಅಂತಿಮವಾಗಿರತಕ್ಕದ್ದು.

ಅಧ್ಯಾಯ – IV

ದಂಡಗಳು ಮತ್ತು ಪ್ರಕ್ರಿಯೆಗಳು

23. 12ನೇ ಪ್ರಕರಣದ ಉಲ್ಲಂಘನೆಗೆ ದಂಡ.– 12ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವೊಬ್ಬ ವ್ಯಕ್ತಿಯು, ಆರು ತಿಂಗಳುಗಳಿಗೆ ಕಡಿಮೆಯಿಲ್ಲದ ಆದರೆ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅಂಥ ಅವಧಿಯ ಕಾರಾವಾಸದಿಂದ ಮತ್ತು ಹತ್ತು ಸಾವಿರ ರೂಪಾಯಿಗಳಿಗೆ ಕಡಿಮೆಯಿಲ್ಲದ ಆದರೆ ಇಪತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಅಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

24. ಯಾರೇ ಅಧಿಕಾರಿಗಳಿಗೆ ಅಡ್ಡಿಯುಂಟುಮಾಡುವುದಕ್ಕಾಗಿ ದಂಡ.– ಯಾವೊಬ್ಬನು,–

(1) ಯಾವೊಬ್ಬ ಹೆಸರಿಸಲಾದ ಅಧಿಕಾರಿಯ, ಪ್ರಾಧಿಕೃತ ಅಧಿಕಾರಿಯ, ಅಧಿಕೃತಗೊಂಡ ಅಧಿಕಾರಿಯ ಅಥವಾ ಪ್ರಾಧಿಕಾರದ ಅಥವಾ ಪ್ರಾಧಿಕೃತಗೊಳಿಸಿದ ಅಥವಾ ಹೆಸರಿಸಲಾದ ಅಧಿಕಾರಿಯ ಆದೇಶಗಳು ಅಥವಾ ನಿರ್ದೇಶನಗಳ ಅಡಿಯಲ್ಲಿ ಕಾರ್ಯನಿರ್ವಹಿಸುವ ಯಾವೊಬ್ಬ ವ್ಯಕ್ತಿಯನ್ನು, ಈ ಅಧಿನಿಯಮ ಅಥವಾ ಅದರಡಿಯಲ್ಲಿ ರಚಿಸಿದ ನಿಯಮಗಳು ಅಥವಾ ವಿನಿಯಮಗಳ ಅಡಿಯಲ್ಲಿ ಆತನ ಅಧಿಕಾರವನ್ನು ಚಲಾಯಿಸುವುದನ್ನು, ಆತನ ಪ್ರಕಾರ್ಯಗಳನ್ನು ನಿರ್ವಹಿಸುವುದನ್ನು ಅಥವಾ ಆತನ ಕರ್ತವ್ಯಗಳನ್ನು ನೆರವೇರಿಸುವುದನ್ನು ಅಡ್ಡಿಪಡಿಸುತ್ತಾನೋ; ಅಥವಾ

(2) ಪ್ರಾಧಿಕಾರದ ಯಾವುದೇ ಕಾಮಗಾರಿಗಳನ್ನು ಅಥವಾ ಸ್ವತ್ತನ್ನು ಹಾನಿಪಡಿಸುತ್ತಾನೋ; ಅಥವಾ

(3) ಪ್ರಾಧಿಕಾರದ ಅಥವಾ ಯಾವೊಬ್ಬ ಪ್ರಾಧಿಕೃತ ಅಧಿಕಾರಿಯ ಅಥವಾ ಹೆಸರಿಸಲಾದ ಅಧಿಕಾರಿಯ ನಿರ್ದೇಶನಗಳ ಮೂಲಕ ಅಥವಾ ಅವುಗಳ ಅಡಿಯಲ್ಲಿ ಭೂಮಿಯಲ್ಲಿ ನಿಲ್ಲಿಸಿರುವ ಯಾವುದೇ ಸ್ತಂಭ, ಕಂಬ ಅಥವಾ ಗೂಟವನ್ನು ಅಥವಾ ಸಿದ್ಧಪಡಿಸಿದ, ಬರೆದ ಅಥವಾ ಇಟ್ಟಿರುವ

ಯಾವುದೇ ನೋಟೀಸನ್ನು ಅಥವಾ ಇತರೆ ವಿಷಯವನ್ನು ಹಾಳು ಮಾಡುತ್ತಾನೊ, ಕೆಡಹುತ್ತಾನೊ, ತೆಗೆದುಹಾಕುತ್ತಾನೊ, ಹಾನಿಗೊಳಿಸುತ್ತಾನೊ ಅಥವಾ ವಿರೂಪಗೊಳಿಸುತ್ತಾನೊ,

– ಆತನು ಒಂದು ವರ್ಷಕ್ಕೆ ವಿಸ್ತರಿಸಬಹುದಾದಂಥ ಅವಧಿಯ ಕಾರವಾಸದಿಂದ ಮತ್ತು ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

25. ಕೆರೆಯ ಕಾನೂನುಬಾಹಿರ ಅಧಿಭೋಗವನ್ನು ವರದಿ ಮಾಡಲು ತಪ್ಪಿದ್ದಕ್ಕಾಗಿ ದಂಡ.– ಕೆರೆಯ ಕಾನೂನುಬಾಹಿರ ಅಧಿಭೋಗದಾರಿಕೆ ಅಥವಾ ಬಳಕೆ ಅಥವಾ ಕೆರೆಯ ನಿರ್ವಹಣೆ ಮತ್ತು ಸಂರಕ್ಷಣೆಯನ್ನು ವರದಿ ಮಾಡುವ ಹೊಣೆಗಾರಿಕೆಯನ್ನು ವಹಿಸಿಕೊಟ್ಟಿರುವ ಪ್ರಾಧಿಕಾರದ ಅಥವಾ ಸರ್ಕಾರದ ಅಥವಾ ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರದ ಒಬ್ಬ ಅಧಿಕಾರಿ ಅಥವಾ ನೌಕರನು, ಅಂಥ ಕಾನೂನುಬಾಹಿರ ಅಧಿಭೋಗದಾರಿಕೆಯನ್ನು ವರದಿ ಮಾಡಲು ಅಥವಾ ತೆರವುಗೊಳಿಸಲು ಕ್ರಮ ಕೈಗೊಳ್ಳಲು ಅಥವಾ ಕೆರೆಯನ್ನು ನಿರ್ವಹಿಸಲು ಅಥವಾ ರಕ್ಷಿಸಲು ತಪ್ಪಿದಲ್ಲಿ, ಇಲಾಖಾ ವಿಚಾರಣೆಯ ತರುವಾಯ ಅಂಥ ಶಿಸ್ತು ದಂಡದಿಂದ ಅಥವಾ ಹತ್ತು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

26. ಅಕ್ರಮ ಅಭಿಗ್ರಹಣಕ್ಕಾಗಿ ಶಿಕ್ಷೆ.– ಈ ಅಧಿನಿಯಮದ ಅಡಿಯಲ್ಲಿ ಮುಟ್ಟುಗೋಲಿಗೆ ಹೊಣೆಯಾಗಿರುವ ಯಾವುದೇ ಸ್ವತ್ತನ್ನು ಅಭಿಗ್ರಹಿಸುವ ಸೋಗಿನಲ್ಲಿ ತೊಂದರೆ ಕೊಡುವುದಕ್ಕಾಗಿ ಮತ್ತು ಅನವಶ್ಯಕವಾಗಿ ಯಾವುದೇ ಸ್ವತ್ತನ್ನು ಅಭಿಗ್ರಹಣ ಮಾಡುವ ಯಾವೊಬ್ಬ ಅಧಿಕಾರಿಯು, ಸಂಬಂಧಪಟ್ಟ ಶಿಸ್ತು ನಿಯಮಗಳಲ್ಲಿ ನಿಯಮಿಸಲ್ಪಟ್ಟಂತೆ ಅಂಥ ದಂಡದಿಂದ ಮತ್ತು ಐದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

27. ಅಧಿನಿಯಮದ ಕೆಲವು ಉಪಬಂಧಗಳ ಉಲ್ಲಂಘನೆಗಾಗಿ ದಂಡ.– ಯಾವೊಬ್ಬ ವ್ಯಕ್ತಿಯು, ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಲಾದ, ಯಾವುವೇ ನಿಯಮಗಳನ್ನು ಅಥವಾ ವಿನಿಯಮಗಳನ್ನು, ನಿರ್ದಿಷ್ಟ ದಂಡವನ್ನು ಕಲ್ಪಿಸದಿರದ ಯಾವುವೇ ಇತರ ಉಪಬಂಧಗಳನ್ನು ಉಲ್ಲಂಘಿಸಿದರೆ ಅಥವಾ ಈ ಅಧಿನಿಯಮದ ಅಡಿಯಲ್ಲಿ ನೀಡಿರುವ ಯಾವುದೇ ಆದೇಶ ಅಥವಾ ನಿರ್ದೇಶನವನ್ನು ಪಾಲಿಸಲು ತಪ್ಪಿದರೆ, ಆತನು ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಮತ್ತು ಐದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

28. 23ನೇ ಪ್ರಕರಣದ ಅಡಿಯಲ್ಲಿ ಹಿಂದಿನ ಅಪರಾಧ ನಿರ್ಣಯದ ತರುವಾಯ ಹೆಚ್ಚಿಸಲಾದ ದಂಡ.– 23ನೇ ಪ್ರಕರಣದ ಅಡಿಯಲ್ಲಿ ಯಾವುದೇ ಅಪರಾಧಕ್ಕಾಗಿ ಅಪರಾಧ ನಿರ್ಣೀತನಾದ ಯಾವೊಬ್ಬ ವ್ಯಕ್ತಿಯು, ಅದೇ ಉಪಬಂಧದ ಉಲ್ಲಂಘನೆಯನ್ನು ಒಳಗೊಳ್ಳುವ ಒಂದು ಅಪರಾಧಕ್ಕೆ ಪುನ: ತಪ್ಪಿತಸ್ಥನೆಂದು ಕಂಡುಬಂದಲ್ಲಿ, ಎರಡನೇ ಮತ್ತು ತರುವಾಯದ ಪ್ರತಿಯೊಂದು ನಿರ್ಣಿತ ಅಪರಾಧಕ್ಕೆ ಆರು ತಿಂಗಳುಗಳಿಗೆ ಕಡಿಮೆಯಲ್ಲದ ಅವಧಿಯ ಕಾರಾವಾಸದಿಂದ ಮತ್ತು ಒಂದು ಲಕ್ಷ ರೂಪಾಯಿಗಳ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

29. ಅಪರಾಧಕ್ಕೆ ದುಷ್ಪ್ರೇರಣೆ.– ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ದಂಡನೀಯವಾಗುವ ಯಾವುದೇ ಅಪರಾಧವನ್ನು ದುಷ್ಪ್ರೇರಿಸುವ ಅಥವಾ ಯಾವುದೇ ಅಂಥ ಅಪರಾಧವನ್ನು ಮಾಡುವುದಕ್ಕೆ ಪ್ರಯತ್ನಿಸಿದ ಯಾವೊಬ್ಬ ವ್ಯಕ್ತಿಯು ಅಂಥ ಅಪರಾಧಕ್ಕಾಗಿ ಈ ಅಧಿನಿಯಮದ ಅಡಿಯಲ್ಲಿ ಉಪಬಂಧಿಸಿದ ದಂಡದಿಂದ ದಂಡಿತನಾಗತಕ್ಕದ್ದು.

30. ಕಂಪೆನಿಗಳಿಂದ/ನಿವಾಸಿ ಸಂಘದಿಂದ ಅಪರಾಧಗಳು.– (1) ಈ ಅಧಿನಿಯಮದ ಅಡಿಯಲ್ಲಿಯ ಒಂದು ಅಪರಾಧವನ್ನು ಒಂದು ಕಂಪೆನಿಯು/ನಿವಾಸಿಗಳ ಸಂಘವು ಮಾಡಿದ್ದಲ್ಲಿ, ಅಪರಾಧವನ್ನು ಮಾಡಿದ ಸಮಯದಲ್ಲಿ ಪ್ರಭಾರದಲ್ಲಿದ್ದ ಮತ್ತು ಕಂಪೆನಿಯ/ನಿವಾಸಿಗಳ ಸಂಘದ ವ್ಯವಹಾರವನ್ನು ನಡೆಸಲು ಜವಾಬ್ದಾರನಾದ ಪ್ರತಿಯೊಬ್ಬ ವ್ಯಕ್ತಿಯು ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಆತನ ವಿರುದ್ಧ ಕೈಗೊಳ್ಳುವ ಕ್ರಮಗಳಿಗೆ ಆತನು ಬದ್ಧನಾಗಿರತಕ್ಕದ್ದು ಮತ್ತು ಅದಕ್ಕನುಸಾರವಾಗಿ ದಂಡನೀಯನಾಗತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿ ಇರುವುದಾವುದೂ, ಅಂಥ ವ್ಯಕ್ತಿಯು ತನ್ನ ತಿಳುವಳಿಕೆಗೆ ಬಾರದೇ ಅಪರಾಧವು ನಡೆದಿದೆ ಅಥವಾ ಅಂಥ ಅಪರಾಧವು ನಡೆಯುವುದನ್ನು ತಪ್ಪಿಸಲು ಎಲ್ಲಾ ಯುಕ್ತ ಕಾರ್ಯತತ್ಪರತೆಯನ್ನು ತಾನು ಚಲಾಯಿಸಿದ್ದೇನೆಂದು ರುಜುವಾತುಪಡಿಸಿದಲ್ಲಿ, ಈ ಅಧಿನಿಯಮದಲ್ಲಿ ಉಪಬಂಧಿಸಿದ ಯಾವುದೇ ದಂಡಕ್ಕೆ ಆತನನ್ನು ಹೊಣೆ ಮಾಡತಕ್ಕದ್ದಲ್ಲ.

ವಿವರಣೆ:– ಈ ಪ್ರಕರಣದ ಉದ್ದೇಶಗಳಿಗಾಗಿ,

(ಎ) 'ಕಂಪೆನಿ' ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಒಂದು ಫರ್ಮ್ ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ;

(ಬಿ) 'ನಿರ್ದೇಶಕ' ಎಂದರೆ, ಒಂದು ಫರ್ಮ್‌ನ ಸಂಬಂಧದಲ್ಲಿ ಫರ್ಮ್‌ನಲ್ಲಿಯ ಪಾಲುದಾರ, ಸಂಘದ ಸಂಬಂಧದಲ್ಲಿ, ಸಂಘದ ಕಾರ್ಯದರ್ಶಿ ಅಥವಾ ಸಂದರ್ಭಾನುಸಾರವಾಗಿ ಅಧ್ಯಕ್ಷ.

31. ಸರ್ಕಾರಿ ಇಲಾಖೆಯಿಂದ ಅಪರಾಧಗಳು.– ಈ ಅಧಿನಿಯಮದ ಅಡಿಯಲ್ಲಿಯ ಒಂದು ಅಪರಾಧವನ್ನು ಸರ್ಕಾರದ ಯಾವುದೇ ಇಲಾಖೆ ಅಥವಾ ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರವು ಮಾಡಿದ್ದಲ್ಲಿ, ಸರ್ಕಾರದ ಇಲಾಖೆಯ ಮುಖ್ಯಸ್ಥ ಅಥವಾ ಅಂಥ ಸ್ಥಳೀಯ ಅಥವಾ ಸಂದರ್ಭಾನುಸಾರವಾಗಿ ಇತರ ಪ್ರಾಧಿಕಾರದ ಪ್ರಭಾರದಲ್ಲಿರುವ (ಯಾವುದೇ ಹೆಸರಿನಿಂದ ಕರೆಯಲ್ಪಡುವ) ಮುಖ್ಯ ಕಾರ್ಯನಿರ್ವಹಣಾಧಿಕಾರಿಯನ್ನು ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಆತನ ವಿರುದ್ಧ ಕೈಗೊಳ್ಳಲಾಗುವ ಕ್ರಮಗಳಿಗೆ ಆತನು ಬದ್ಧನಾಗಿರತಕ್ಕದ್ದು ಮತ್ತು ಅದಕ್ಕನುಸಾರವಾಗಿ ದಂಡನೀಯನಾಗತಕ್ಕದ್ದು:

ಪರಂತು, ಈ ಪ್ರಕರಣದಲ್ಲಿ ಇರುವುದಾವುದೂ, ಅಂಥ ಇಲಾಖೆಯ ಮುಖ್ಯಸ್ಥ ಅಥವಾ ಸಂದರ್ಭಾನುಸಾರವಾಗಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯು ತನ್ನ ತಿಳುವಳಿಕೆಗೆ ಬಾರದೇ ಅಪರಾಧವು ನಡೆದಿದೆ ಮತ್ತು ಅಂಥ ಅಪರಾಧ ನಡೆಯುವುದನ್ನು ತಪ್ಪಿಸಲು ಎಲ್ಲಾ ಯುಕ್ತ ಕಾರ್ಯತತ್ಪರತೆಯನ್ನು ತಾನು ಚಲಾಯಿಸಿದ್ದೇನೆಂದು ಸಾಬೀತುಪಡಿಸಿದಲ್ಲಿ, ಈ ಅಧಿನಿಯಮದಲ್ಲಿ ಉಪಬಂಧಿಸಿದ ಯಾವುದೇ ದಂಡಕ್ಕೆ ಆತನನ್ನು ಹೊಣೆ ಮಾಡತಕ್ಕದ್ದಲ್ಲ.

32. ವಾರಂಟು ಇಲ್ಲದೆ ದಸ್ತಗಿರಿ.– (1) ಯಾವೊಬ್ಬ ವ್ಯಕ್ತಿಯು, ಈ ಅಧಿನಿಯಮದ ಅಡಿಯಲ್ಲಿ ಒಂದು ವರ್ಷ ಅಥವಾ ಅದಕ್ಕೂ ಹೆಚ್ಚಿನ ಕಾರಾವಾಸದಿಂದ ದಂಡನೀಯವಾದ ಯಾವುದೇ ಅಪರಾಧವನ್ನು ಎಸಗಿದ್ದಾನೆಂದು ಯುಕ್ತವಾಗಿ ಸಂದೇಹಿತನಾಗಿದ್ದು, ಆತನು ತನ್ನ ಹೆಸರು ಮತ್ತು ನಿವಾಸದ ವಿಳಾಸವನ್ನು ಕೊಡಲು ನಿರಾಕರಿಸಿದಲ್ಲಿ ಅಥವಾ ಮೋಸವೆಂದು ನಂಬುವುದಕ್ಕೆ ಕಾರಣವಿರುವ ಹೆಸರು ಅಥವಾ ನಿವಾಸದ ವಿಳಾಸವನ್ನು ನೀಡಿದ್ದಲ್ಲಿ ಅಥವಾ ಆತನು ತಲೆಮರೆಸಿಕೊಳ್ಳುತ್ತಾನೆಂದು ನಂಬಲು ಕಾರಣವಿದ್ದಲ್ಲಿ ಆ ವ್ಯಕ್ತಿಯನ್ನು ಯಾವೊಬ್ಬ ಪೊಲೀಸ್ ಅಧಿಕಾರಿ ಅಥವಾ ಹೆಸರಿಸಲಾದ ಅಧಿಕಾರಿ ಅಥವಾ ಅಧಿಕೃತ ಅಧಿಕಾರಿಯು, ಮ್ಯಾಜಿಸ್ಟ್ರೇಟರನ ಆದೇಶಗಳಿಲ್ಲದೆ ಮತ್ತು ವಾರಂಟು ಇಲ್ಲದೆ ದಸ್ತಗಿರಿ ಮಾಡಬಹುದು.

(2) ಈ ಪ್ರಕರಣದ ಅಡಿಯಲ್ಲಿ ದಸ್ತಗಿರಿಯಾದ ಯಾವೊಬ್ಬ ವ್ಯಕ್ತಿಗೆ, ಆದಷ್ಟು ಬೇಗನೆ, ಅಂಥ ದಸ್ತಗಿರಿಯ ಆಧಾರಗಳ ಮಾಹಿತಿಯನ್ನು ನೀಡತಕ್ಕದ್ದು ಮತ್ತು ದಸ್ತಗಿರಿಯ ಸ್ಥಳದಿಂದ ಮ್ಯಾಜಿಸ್ಟ್ರೇಟರನ ನ್ಯಾಯಾಲಯಕ್ಕೆ ಪ್ರಯಾಣಕ್ಕಾಗಿ ಅವಶ್ಯವಾಗುವ ಸಮಯವನ್ನು ಹೊರತುಪಡಿಸಿ, ಅಂಥ ದಸ್ತಗಿರಿಯ ಇಪ್ಪತ್ನಾಲ್ಕು ಗಂಟೆಯೊಳಗೆ ಆ ಪ್ರಕರಣದ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಹತ್ತಿರದ ಮ್ಯಾಜಿಸ್ಟ್ರೇಟರ್ ಎದುರಿಗೆ ಹಾಜರುಪಡಿಸತಕ್ಕದ್ದು ಮತ್ತು ಅಂಥ ವ್ಯಕ್ತಿಯನ್ನು ಮ್ಯಾಜಿಸ್ಟ್ರೇಟರನ ಪ್ರಾಧಿಕಾರವಿಲ್ಲದೆ ಸದರಿ ಅವಧಿಗೆ ಮೀರಿ ಅಭಿರಕ್ಷೆಯಲ್ಲಿ ಬಂಧಿಸಿಡತಕ್ಕದ್ದಲ್ಲ.

33. ದಸ್ತಗಿರಿಯಾದ ಒಬ್ಬ ವ್ಯಕ್ತಿಯನ್ನು ಬಾಂಡ್ ಮೇಲೆ ಬಿಡುಗಡೆಗೊಳಿಸುವ ಅಧಿಕಾರ.– 32ನೇ ಪ್ರಕರಣದ ಅಡಿಯಲ್ಲಿ ಯಾವೊಬ್ಬ ವ್ಯಕ್ತಿಯನ್ನು ದಸ್ತಗಿರಿ ಮಾಡಿದ ಯಾವೊಬ್ಬ ಪೊಲೀಸ್ ಅಧಿಕಾರಿ ಅಥವಾ ಹೆಸರಿಸಲಾದ ಅಧಿಕಾರಿಯು, ಆ ಪ್ರಕರಣದ ಅಧಿಕಾರವ್ಯಾಪ್ತಿಯುಳ್ಳ ಮ್ಯಾಜಿಸ್ಟ್ರೇಟರನ ಮುಂದೆ ಅಥವಾ ಹತ್ತಿರದ ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಯ ಮುಂದೆ ಹಾಜರಾಗಲು ಹಾಗೆ ಅಗತ್ಯಪಡಿಸಿದರೆ ಮತ್ತು ಆಗ ಅಂಥ ವ್ಯಕ್ತಿಯು, ಸೂಕ್ತ ಭದ್ರತೆಯೊಂದಿಗೆ ಒಂದು ಬಾಂಡ್ ಅನ್ನು ಬರೆದುಕೊಟ್ಟಲ್ಲಿ, ಆ ವ್ಯಕ್ತಿಯನ್ನು ಬಿಡುಗಡೆಗೊಳಿಸಬಹುದು.

34. ಅಪರಾಧಗಳ ಸಂಜ್ಞೇಯತೆ.– ಈ ಅಧಿನಿಯಮದ ಅಡಿಯಲ್ಲಿ ಅಪರಾಧಗಳು ಸಂಜ್ಞೇಯವಾಗಿರತಕ್ಕದ್ದು.

ಅಧ್ಯಾಯ – V

ಪ್ರಾಧಿಕಾರದ ನಿಧಿ, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

35. ಪ್ರಾಧಿಕಾರದ ನಿಧಿ.– (1) ಸರ್ಕಾರವು ಕಾಲಕಾಲಕ್ಕೆ ಮೊತ್ತವನ್ನು ಪಾವತಿಸಬಹುದಾದ, ಅಂಥ ತನ್ನದೇ ಆದ ಒಂದು ನಿಧಿಯನ್ನು ಪ್ರಾಧಿಕಾರವು ಹೊಂದಿರತಕ್ಕದು ಮತ್ತು ಎಲ್ಲಾ ಇತರ ಸ್ವೀಕೃತಿಗಳನ್ನು (ದಾನಗಳು, ಅನುದಾನ, ದಂಡಗಳು, ಶುಲ್ಕಗಳು, ಚಾರ್ಜುಗಳು ಅಥವಾ ಅನ್ಯಥಾ) ಪ್ರಾಧಿಕಾರದ ನಿಧಿಗೆ ವರ್ಗಾಯಿಸತಕ್ಕದ್ದು ಮತ್ತು ಪ್ರಾಧಿಕಾರಕ್ಕೆ ಎಲ್ಲಾ ಸಂದಾಯಗಳನ್ನು ಅದರ ಮೂಲಕ ಮಾಡತಕ್ಕದ್ದು.

(2) ಪ್ರಾಧಿಕಾರವು, ಈ ಅಧಿನಿಯಮದ ಅಡಿಯಲ್ಲಿ ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ತನ್ನ ಕರ್ತವ್ಯಗಳನ್ನು ನೆರವೇರಿಸಲು ಮತ್ತು ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಅಂಥ ಮೊತ್ತವನ್ನು ಖರ್ಚು ಮಾಡಬಹುದು. ಅಂಥ ಮೊತ್ತವನ್ನು ಪ್ರಾಧಿಕಾರದ ನಿಧಿಯಿಂದ ಸಂದಾಯ ಮಾಡಬಹುದಾದ ವೆಚ್ಚವೆಂದು ಪರಿಗಣಿಸತಕ್ಕದ್ದು.

(3) ಪ್ರಾಧಿಕಾರವು, ನಿಧಿಯನ್ನು ನಿಯಮಿಸಬಹುದಾದ ಅಂಥ ರೀತಿಯಲ್ಲಿ ಯೋಜನೆ ಅಥವಾ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದಕ್ಕಾಗಿ ಜಿಲ್ಲಾ ಕಾರ್ಯನಿರ್ವಹಣಾ ಪ್ರಾಧಿಕಾರಕ್ಕೆ ಬಿಡುಗಡೆ ಮಾಡಬಹುದು.

36. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.– (1) ಪ್ರಾಧಿಕಾರವು ಕ್ರಮಬದ್ಧವಾದ ಲೆಕ್ಕಪತ್ರಗಳು ಮತ್ತು ಇತರ ದಾಖಲೆಗಳನ್ನು ನಿರ್ವಹಿಸತಕ್ಕದ್ದು ಹಾಗೂ ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಮತ್ತು ಅಂಥ ವಿಧಾನದಲ್ಲಿ ಲೆಕ್ಕಪತ್ರಗಳ ವಾರ್ಷಿಕ ವಿವರ ಪಟ್ಟಿಕೆಯನ್ನು ತಯಾರಿಸತಕ್ಕದ್ದು.

(2) ರಾಜ್ಯ ಲೆಕ್ಕಪತ್ರ ಇಲಾಖೆ ಅಥವಾ ಸರ್ಕಾರವು ನೇಮಿಸಿದ ಅಂಥ ಲೆಕ್ಕಪರಿಶೋಧಕರು ಪ್ರಾಧಿಕಾರದ ಲೆಕ್ಕಪತ್ರಗಳ ಲೆಕ್ಕ ಪರಿಶೋಧನೆಯನ್ನು ಮಾಡತಕ್ಕದ್ದು.

(3) ಸದರಿ ಲೆಕ್ಕಪರಿಶೋಧಕರು ಪ್ರಾಧಿಕಾರದ ಪುಸ್ತಕಗಳು, ಲೆಕ್ಕಪತ್ರಗಳು, ಸಂಬಂಧಪಟ್ಟ ವೋಚರುಗಳು ಮತ್ತು ಇತರ ದಾಖಲೆಗಳು ಹಾಗೂ ಕಾಗದಪತ್ರಗಳನ್ನು ಹಾಜರುಪಡಿಸಲು ಒತ್ತಾಯಪಡಿಸುವ ಮತ್ತು ಪ್ರಾಧಿಕಾರದ ಯಾವುವೇ ಕಚೇರಿಗಳನ್ನು ತಪಾಸಣೆ ಮಾಡುವ ಹಕ್ಕನ್ನು ಹೊಂದಿರತಕ್ಕದ್ದು.

(4) ಪ್ರಾಧಿಕಾರವು, ಪ್ರತಿಯೊಂದು ಹಣಕಾಸು ವರ್ಷವು ಕೊನೆಗೊಂಡಂದಿನಿಂದ ಒಂಬತ್ತು ತಿಂಗಳುಗಳೊಳಗೆ ಒಂದು ಲೆಕ್ಕಪರಿಶೋಧಿತ ಪ್ರತಿಯೊಂದಿಗೆ ಲೆಕ್ಕಪರಿಶೋಧಕರ ವರದಿಯ ಪ್ರತಿಯನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು.

(5) ಸರ್ಕಾರವು, (4)ನೇ ಉಪಪ್ರಕರಣದ ಅಡಿಯಲ್ಲಿ ಲೆಕ್ಕಪರಿಶೋಧನಾ ವರದಿಯನ್ನು ಸ್ವೀಕರಿಸಿದ ತರುವಾಯ, ಆದಷ್ಟು ಬೇಗನೇ, ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

37. ವಾರ್ಷಿಕ ವರದಿ.– ಪ್ರಾಧಿಕಾರವು, ಪ್ರತಿ ಹಣಕಾಸು ವರ್ಷದಲ್ಲಿ, ಹಿಂದಿನ ಹಣಕಾಸು ವರ್ಷದ ಅವಧಿಯಲ್ಲಿಯ, ಈ ಅಧಿನಿಯಮದ ಅಡಿಯಲ್ಲಿ ತನ್ನ ಚಟುವಟಿಕೆಗಳ ಪೂರ್ಣ ಮಾಹಿತಿಯನ್ನು ಕೊಡುವ ವಾರ್ಷಿಕ ವರದಿಯನ್ನು, ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ತಯಾರಿಸತಕ್ಕದ್ದು ಮತ್ತು ಹಿಂದಿನ ಹಣಕಾಸು ವರ್ಷದ ಕೊನೆಯ ದಿನಾಂಕದಿಂದ ನಾಲ್ಕು ತಿಂಗಳುಗಳೊಳಗೆ ಅದರ ಪ್ರತಿಗಳನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಸರ್ಕಾರವು, ಅಂಥ ವರದಿಯನ್ನು ಹಿಂದಿನ ಹಣಕಾಸು ವರ್ಷದ ಕೊನೆಯ ದಿನಾಂಕದಿಂದ ಒಂಭತ್ತು ತಿಂಗಳುಗಳ ಅವಧಿಯೊಳಗೆ ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

38. ಆಯವ್ಯಯ.– ಪ್ರಾಧಿಕಾರವು, ಪ್ರತಿ ಹಣಕಾಸು ವರ್ಷದ ಅವಧಿಯಲ್ಲಿ, ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಮತ್ತು ಅಂಥ ಸಮಯದಲ್ಲಿ, ಮುಂಬರುವ ಹಣಕಾಸು ವರ್ಷದ ಸಂಬಂಧದಲ್ಲಿ ಅಂದಾಜು ಸ್ವೀಕೃತಿ ಮತ್ತು ವೆಚ್ಚವನ್ನು ತೋರಿಸುವ ಆಯವ್ಯಯವನ್ನು ತಯಾರಿಸತಕ್ಕದ್ದು ಮತ್ತು ಅದರ ಪ್ರತಿಯನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು.

39. ಪ್ರಾಧಿಕಾರದ ಸಾಲಪಡೆಯುವ ಅಧಿಕಾರ.– ಪ್ರಾಧಿಕಾರವು, ಸರ್ಕಾರದ ಅನುಮತಿಯೊಂದಿಗೆ ಅಥವಾ ಅದಕ್ಕೆ ಸರ್ಕಾರವು ನೀಡಿದ ಯಾವುದೇ ಸಾಮಾನ್ಯ ಅಥವಾ ವಿಶೇಷ ಅಧಿಕಾರದ ನಿಬಂಧನೆಗಳಿಗೆ ಅನುಸಾರವಾಗಿ, ಸಾಲಗಳು ಅಥವಾ ಬಾಂಡುಗಳು, ಡಿಬೆಂಚರುಗಳನ್ನು ನೀಡುವ ಅಥವಾ ಈ ಅಧಿನಿಯಮದ ಅಡಿಯಲ್ಲಿ ತನ್ನ ಯಾವುದೇ ಅಥವಾ ಎಲ್ಲಾ ಪ್ರಕಾರ್ಯಗಳನ್ನು ನಿರ್ವಹಿಸಲು ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ಇತರ ಲಿಖಿತ ಪತ್ರಗಳನ್ನು ನೀಡುವ ಮೂಲಕ ಯಾವುದೇ ಮೂಲದಿಂದ ಹಣವನ್ನು ಸಾಲ ಪಡೆಯಬಹುದು.

40. ಕರಾರು ಮಾಡುವ ವಿಧಾನ.– ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯು ಕ್ರಮಕೈಗೊಳ್ಳಲು ಅಧಿಕಾರವನ್ನು ಹೊಂದಿರುವ ವಿಷಯಗಳ ಸಂಬಂಧದಲ್ಲಿ, ಆತನು ಪ್ರಾಧಿಕಾರದ ಪರವಾಗಿ ಕರಾರುಗಳು ಮತ್ತು ಒಪ್ಪಂದಗಳನ್ನು ಕಾರ್ಯಗತಗೊಳಿಸತಕ್ಕದ್ದು. ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದ ಅಂಥ ಮೊತ್ತದವರೆಗೆ ಪ್ರಾಧಿಕಾರದ ಪರವಾಗಿ ಅಂಥ ಕರಾರುಗಳು ಅಥವಾ ಒಪ್ಪಂದಗಳನ್ನು ಆತನು ಕಾರ್ಯಗತಗೊಳಿಸಬಹುದು. ಇತರ ಎಲ್ಲಾ ಪ್ರಕರಣಗಳಲ್ಲಿ ಪ್ರಾಧಿಕಾರದ ಮಂಜೂರಾತಿಯೊಂದಿಗೆ ಮಾತ್ರವೇ ಆತನು ಒಂದು ಕರಾರು ಅಥವಾ ಒಪ್ಪಂದವನ್ನು ಕಾರ್ಯಗತಗೊಳಿಸತಕ್ಕದ್ದು.

ಅಧ್ಯಾಯ – VI

ಸಂಕೀರ್ಣ

41. ಸರ್ಕಾರದ, ಸ್ಥಳೀಯ ಪ್ರಾಧಿಕಾರಗಳು ಇತ್ಯಾದಿಗಳ ಅಧಿಕಾರಿಗಳು ನೆರವು ನೀಡುವುದು.– ಸರ್ಕಾರದ, ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರದ ಅಥವಾ ನೀರಿನ ಬಳಕೆದಾರರ ಸೊಸೈಟಿ ಅಥವಾ ಸಂಘದ ಎಲ್ಲಾ ಅಧಿಕಾರಿಗಳು ಪ್ರಾಧಿಕಾರಕ್ಕೆ, ಅದರ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕೆ ಅಗತ್ಯವಾಗಬಹುದಾದ ಅಂಥ ನೆರವು ಮತ್ತು ಸಹಾಯವನ್ನು ನೀಡತಕ್ಕದ್ದು ಮತ್ತು ಅಂಥ ಮಾಹಿತಿಯನ್ನು ಒದಗಿಸತಕ್ಕದ್ದು ಮತ್ತು ಅದರ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕೆ ಅವಶ್ಯವಾಗಬಹುದಾದ ಅಂಥ ದಾಖಲೆಗಳು, ಭೂಪಟಗಳು, ನಕ್ಷೆಗಳು ಮತ್ತು ಇತರ ದಸ್ತಾವೇಜುಗಳ ತಪಾಸಣೆ ಮತ್ತು ಪರೀಕ್ಷೆಗಾಗಿ ಪ್ರಾಧಿಕಾರಕ್ಕೆ ಅಥವಾ ಈ ಬಗ್ಗೆ ಪ್ರಾಧಿಕೃತನಾದ ಯಾವೊಬ್ಬ ಇತರ ಅಧಿಕಾರಿಗೆ ಲಭ್ಯವಾಗುವಂತೆ ಮಾಡತಕ್ಕದ್ದು.

42. ಅಧಿಕಾರ ವ್ಯಾಪ್ತಿಯ ಪ್ರತಿಷೇಧ.– 14ನೇ ಪ್ರಕರಣದ ಅಡಿಯಲ್ಲಿ ಯಾವುದೇ ಸಾಧನ, ಸಲಕರಣೆ, ಯಂತ್ರೋಪಕರಣ, ಉಪಕರಣ, ಸಾಧನ ಸಾಮಗ್ರಿ, ದೋಣಿ, ವಾಹನ ಅಥವಾ ಇತರ ಯಾವುದೇ ಸ್ವತ್ತನ್ನು ಸ್ವಾಧೀನಪಡಿಸಿಕೊಂಡಿದ್ದಲ್ಲಿ, 15 ಮತ್ತು 16ನೇ ಪ್ರಕರಣಗಳ ಅಡಿಯಲ್ಲಿ ಪ್ರಾಧಿಕೃತ ಅಧಿಕಾರಿಯು ಅಥವಾ 18ನೇ ಪ್ರಕರಣದ ಅಡಿಯಲ್ಲಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯು ಅಥವಾ 19ನೇ ಪ್ರಕರಣದ ಅಡಿಯಲ್ಲಿ ಮೇಲ್ಮನವಿಯ ಕೇಳುವಿಕೆಯನ್ನು (ಹಿಯರಿಂಗ್) ಮಾಡುವ ಸೆಷನ್ಸ್ ನ್ಯಾಯಾಧೀಶರು, ದಂಡ ಪ್ರಕ್ರಿಯಾ ಸಂಹಿತೆ 1973ರ (1974ರ ಕೇಂದ್ರ ಅಧಿನಿಯಮ 2) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇನ್ನಾವುದೇ ಇತರ ಕಾನೂನಿನ ಅನುಸಾರವಾಗಿ ಅಧಿಕಾರಗಳನ್ನು ಚಲಾಯಿಸುವ ಹಕ್ಕುಳ್ಳವರಾಗಿರತಕ್ಕದ್ದು ಮತ್ತು ಇತರ ಯಾವುದೇ ಅಧಿಕಾರಿ, ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಪ್ರಾಧಿಕಾರವು ಅಂಥ ಸ್ವತ್ತಿನ ಅಭಿರಕ್ಷೆ, ಸ್ವಾಧೀನತೆ, ಬಟವಾಡೆ, ವಿಲೆ ಅಥವಾ ಹಂಚಿಕೆಗೆ ಸಂಬಂಧಿಸಿದಂತೆ ಆದೇಶ ಮಾಡುವ ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದು.

43. ಅಧಿಕಾರಿಗಳು ಸಾರ್ವಜನಿಕ ನೌಕರರಾಗಿರುವುದು.– ಪ್ರಾಧಿಕಾರದ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಮತ್ತು ಇತರ ನೌಕರರನ್ನು ಮತ್ತು ಈ ಅಧಿನಿಯಮ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಮೂಲಕ ಪ್ರದತ್ತವಾದ ಯಾವುದೇ ಅಧಿಕಾರಗಳನ್ನು ಚಲಾಯಿಸುವ ಯಾವೊಬ್ಬ ಇತರ ಅಧಿಕಾರಿಯನ್ನು ಭಾರತ ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ಸಾರ್ವಜನಿಕ ನೌಕರನೆಂದು ಭಾವಿಸತಕ್ಕದ್ದು.

44. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.– ಈ ಅಧಿನಿಯಮ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಅಥವಾ ವಿನಿಯಮಗಳ ಅಡಿಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಬೇಕಾದುದನ್ನು ಲೋಪ ಮಾಡಿದ ಕಾರ್ಯದ ಸಂಬಂಧದಲ್ಲಿ, ಪ್ರಾಧಿಕಾರದ, ಅಥವಾ ಪ್ರಾಧಿಕಾರದ ಅಧ್ಯಕ್ಷರ ಅಥವಾ ಸದಸ್ಯರ ಅಥವಾ ಪ್ರಾಧಿಕಾರದ ಯಾವೊಬ್ಬ ಅಧಿಕಾರಿ ಅಥವಾ ನೌಕರರ ಅಥವಾ ಈ ಅಧಿನಿಯಮದ ಅಡಿಯಲ್ಲಿ ಪ್ರಾಧಿಕಾರವು ನೇಮಕ ಮಾಡಿದ ಅಥವಾ ಪ್ರಾಧಿಕೃತಗೊಳಿಸಿದ ಯಾವೊಬ್ಬ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಯಾವುದೇ ಇತರ ಕಾನೂನು ವ್ಯವಹರಣೆಗಳನ್ನು ನಡೆಸಲು ಅವಕಾಶ ಇರತಕ್ಕದ್ದಲ್ಲ.

45. ಕರ್ತವ್ಯದ ನೆಪದಲ್ಲಿ ಮಾಡಿದ ಕಾರ್ಯಗಳ ಸಂಬಂಧದಲ್ಲಿ ದಾವೆಗಳು ಅಥವಾ ಪ್ರಾಸಿಕ್ಯೂಷನ್.– (1) ಈ ಅಧಿನಿಯಮದ ಅಡಿಯಲ್ಲಿ ಪ್ರಾಧಿಕಾರದ ಹೆಸರಿಸಲಾದ ಅಧಿಕಾರಿಯು, ಪ್ರಾಧಿಕೃತ ಅಧಿಕಾರಿಯು ಅಥವಾ ಯಾವೊಬ್ಬ ಇತರ ಅಧಿಕಾರಿಯು ಅಥವಾ ನೌಕರನು ಮಾಡಿದ್ದಾನೆಂದು ಆಪಾದಿಸಲಾದ ಅಪರಾಧದ ಅಥವಾ ಅಂಥ ಹೆಸರಿಸಲಾದ ಅಧಿಕಾರಿಯು, ಪ್ರಾಧಿಕೃತ ಅಧಿಕಾರಿಯು ಅಥವಾ ಇತರ ಅಧಿಕಾರಿಯು ಅಥವಾ ನೌಕರನು ಅಂಥ ಕರ್ತವ್ಯದ ನೆಪದಲ್ಲಿ ಅಥವಾ ಕರ್ತವ್ಯವನ್ನು ಅಥವಾ ಅಧಿಕಾರವನ್ನು ಮೀರಿ ಯಾವುದೇ ಕಾರ್ಯವನ್ನು ಮಾಡಿದ್ದಾನೆಂದು ಆಪಾದಿಸಲಾದ ತಪ್ಪಿನ ಯಾವುದೇ ಪ್ರಕರಣದಲ್ಲಿ ಅಪರಾಧವನ್ನು ಎಸಗಿದ್ದಲ್ಲಿ ಅಥವಾ ಮಾಡಿದ್ದಲ್ಲಿ, ಅದು ಮೇಲೆ ಹೇಳಿದ ಸ್ವರೂಪದ್ದಾಗಿದೆಯೆಂದು ನ್ಯಾಯಾಲಯಕ್ಕೆ ಕಂಡುಬಂದಲ್ಲಿ, ಸರ್ಕಾರದ ಪೂರ್ವ ಮಂಜೂರಾತಿಯ ಹೊರತಾಗಿ ಅವರ ವಿರುದ್ಧ ಪ್ರಾಸಿಕ್ಯೂಷನ್ ಅಥವಾ ದಾವೆಯನ್ನು ಪುರಸ್ಕರಿಸತಕ್ಕದ್ದಲ್ಲ.

(2) ಮೇಲೆ ಹೇಳಿದಂತೆ ಅಂಥ ತಪ್ಪಿನ ಕಾರಣದಿಂದಾಗಿ, ಉದ್ದೇಶಿಸಲಾದ ದಾವೆಯ ಸಂದರ್ಭದಲ್ಲಿ, ದಾವೆಯನ್ನು ಹೂಡಲು ಉದ್ದೇಶಿಸಿದ ವ್ಯಕ್ತಿಯು, ಫಿರ್ಯಾದಿನಲ್ಲಿ ಹೇಳಿದ ತಪ್ಪಿನ ಬಗ್ಗೆ ಸಾಕಷ್ಟು ವಿವರಣೆಯೊಂದಿಗೆ ಉದ್ದೇಶಿತ ದಾವೆಯ ದಿನಾಂಕದಿಂದ ಕನಿಷ್ಠ ಮೂರು ತಿಂಗಳ ನೋಟೀಸನ್ನು, ಆರೋಪಿತ ತಪ್ಪು ಮಾಡಿದವನಿಗೆ ನೀಡಲು ಬದ್ಧನಾಗಿರತಕ್ಕದ್ದು, ಅದಕ್ಕೆ ತಪ್ಪಿದಲ್ಲಿ ಅಂಥ ದಾವೆಯನ್ನು ನಡೆಸತಕ್ಕದ್ದಲ್ಲ.

(3) ವಾದಪತ್ರದಲ್ಲಿ ಪ್ರತಿವಾದಿಗೆ, ಮೇಲೆ ಹೇಳಿದಂತೆ ನೋಟೀಸನ್ನು ಜಾರಿ ಮಾಡಲಾಗಿದೆಯೆಂಬುದನ್ನು ಮತ್ತು ಅಂಥ ಜಾರಿಯ ದಿನಾಂಕವನ್ನು ತಿಳಿಸತಕ್ಕದ್ದು ಹಾಗೂ ಪ್ರತಿವಾದಿಯು ಪರಿಹಾರವನ್ನು ನೀಡಿದ್ದರೆ, ಹಾಗೆ ನೀಡಿದ ಪರಿಹಾರ ಎಷ್ಟು ಎಂಬುದನ್ನು ಅದರಲ್ಲಿ ತಿಳಿಸತಕ್ಕದ್ದು. ಸದರಿ ನೋಟೀಸಿನ ಒಂದು ಪ್ರತಿಯನ್ನು, ಅದನ್ನು ಜಾರಿ ಮಾಡಿದ ಸಮಯ ಮತ್ತು ವಿಧಾನದ ಬಗ್ಗೆ ಘೋಷಣಾ ಪತ್ರವನ್ನು ಹಿಂಬರಹ ಮಾಡಿ ವಾದಿಯು ವಾದಪತ್ರಕ್ಕೆ ಲಗತ್ತಿಸತಕ್ಕದ್ದು.

46. ಅಧಿಕಾರಗಳ ಪ್ರತ್ಯಾಯೋಜನೆ.– ಪ್ರಾಧಿಕಾರವು, ಈ ಅಧಿನಿಯಮದ ಅಡಿಯಲ್ಲಿ ತನಗೆ ಅಥವಾ ತನ್ನ ಅಧೀನದಲ್ಲಿರುವ ಯಾವೊಬ್ಬ ಅಧಿಕಾರಿಗೆ ಪ್ರದತ್ತವಾದ ಅಧಿಕಾರಗಳ ಪೈಕಿ ಯಾವುವೇ ಅಧಿಕಾರಗಳನ್ನು, ಅಧಿಸೂಚನೆಯ ಮೂಲಕ, ಯಾವೊಬ್ಬ ಅಧಿಕಾರಿಗೆ ಅಥವಾ ತನ್ನ ಅಧೀನದಲ್ಲಿರುವ ಪ್ರಾಧಿಕಾರಕ್ಕೆ, ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ನಿರ್ಬಂಧಗಳು ಮತ್ತು ಷರತ್ತುಗಳು, ಯಾವುದಾದರೂ ಇದ್ದಲ್ಲಿ, ಅವುಗಳಿಗೆ ಒಳಪಟ್ಟು, ಅಂಥ ಅಧಿಕಾರಿ ಅಥವಾ ಪ್ರಾಧಿಕಾರವು ಚಲಾಯಿಸಲು ಪ್ರತ್ಯಾಯೋಜಿಸಬಹುದು.

47. ಇತರ ಕಾನೂನುಗಳ ಪರಿಣಾಮ.– (1) (2)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಈ ಅಧಿನಿಯಮ ಮತ್ತು ಅದರಡಿಯಲ್ಲಿ ರಚಿಸಲಾದ ನಿಯಮಗಳು ಮತ್ತು ವಿನಿಯಮಗಳು, ಈ ಅಧಿನಿಯಮವನ್ನು ಹೊರತುಪಡಿಸಿ, ಯಾವುದೇ ಅಧಿನಿಯಮದಲ್ಲಿ ಒಳಗೊಂಡಿರುವುದಕ್ಕೆ ಅಸಂಗತವಾಗಿರುವುದು ಏನೇ ಇದ್ದರೂ, ಪರಿಣಾಮಕಾರಿಯಾಗಿರತಕ್ಕದ್ದು.

(2) ಈ ಅಧಿನಿಯಮದಲ್ಲಿ ಇರುವುದಾವುದೂ, ಈ ಅಧಿನಿಯಮದ ಅಡಿಯಲ್ಲಿ ಅಪರಾಧವಾಗುವ, ಯಾವುದೇ ಕಾರ್ಯ ಅಥವಾ ಲೋಪಕ್ಕಾಗಿ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಅಡಿಯಲ್ಲಿ ಪ್ರಾಸಿಕ್ಯೂಟ್ ಮಾಡುವುದರಿಂದ ಮತ್ತು ದಂಡವನ್ನು ವಿಧಿಸುವುದರಿಂದ ಅಥವಾ ಈ ಅಧಿನಿಯಮ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳಲ್ಲಿ ಉಪಬಂಧ ಕಲ್ಪಿಸಿದುದನ್ನು ಹೊರತುಪಡಿಸಿ, ಯಾವುದೇ ಹೆಚ್ಚಿನ ಶಿಕ್ಷೆಗೆ ಅಥವಾ ದಂಡಕ್ಕೆ ಅಂಥ ಇತರ ಕಾನೂನಿನ ಅಡಿಯಲ್ಲಿ ಹೊಣೆಗಾರನಾಗುವುದರಿಂದ, ಯಾವೊಬ್ಬ ವ್ಯಕ್ತಿಯನ್ನು ಪ್ರತಿಬಂಧಿಸತಕ್ಕದ್ದಲ್ಲ:

ಪರಂತು, ಯಾವೊಬ್ಬ ವ್ಯಕ್ತಿಯು ಒಂದೇ ಅಪರಾಧಕ್ಕಾಗಿ ಎರಡು ಬಾರಿ ದಂಡಿತನಾಗತಕ್ಕದ್ದಲ್ಲ.

48. **ತೊಂದರೆಯ ನಿವಾರಣೆ.–** ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದಲ್ಲಿ, ಸರ್ಕಾರವು, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂತೆ, ಆದೇಶದ ಮೂಲಕ ತೊಂದರೆಗಳನ್ನು ನಿವಾರಿಸಬಹುದು.

49. **ಪ್ರಾಧಿಕಾರದ ವಿರುದ್ಧ ದಾವೆಯ ನೋಟೀಸು ಇತ್ಯಾದಿ.–** (1) ಈ ಅಧಿನಿಯಮ ಅಥವಾ ಅದರಡಿಯಲ್ಲಿ ರಚಿಸಿದ ನಿಯಮಗಳ ಅಥವಾ ವಿನಿಯಮಗಳ ಅನುಸಾರವಾಗಿ ಮಾಡಿದ ಅಥವಾ ಮಾಡಲಾಗಿದೆಯೆಂದು ಭಾವಿಸಲಾಗುವ ಯಾವುದೇ ಕಾರ್ಯಕ್ಕಾಗಿ ಉದ್ದೇಶಿಸಿದ ದಾವೆ ಅಥವಾ ಇತರ ವ್ಯವಹರಣೆಗಳ ಆದರೆ, ಅದರ ಕಾರಣವನ್ನು ತಿಳಿಸುವ ಮೂರು ತಿಂಗಳ ಲಿಖಿತ ನೋಟೀಸನ್ನು ನೀಡದ ಹೊರತು, ಮತ್ತು ಅಂಥ ದಾವೆ ಅಥವಾ ಇತರ ವ್ಯವಹರಣೆಗಳ ಕಾರಣ ಉಂಟಾದಂದಿನಿಂದ ಆರು ತಿಂಗಳುಗಳ ತರುವಾಯ ಅಥವಾ ಸಾಕಷ್ಟು ಪರಿಹಾರವನ್ನು ನೀಡಿದ ತರುವಾಯ ಪ್ರಾಧಿಕಾರದ, ಪ್ರಾಧಿಕಾರದ ಅಧ್ಯಕ್ಷನ ಅಥವಾ ಯಾವೊಬ್ಬ ಸದಸ್ಯನ ವಿರುದ್ಧ ಯಾವುದೇ ದಾವೆ ಅಥವಾ ಇತರ ವ್ಯವಹರಣೆಗಳನ್ನು ಪ್ರಾರಂಭಿಸತಕ್ಕದ್ದಲ್ಲ.

(2) ಪ್ರಾಧಿಕಾರವು, ಅದರ ಅಧ್ಯಕ್ಷನು ಅಥವಾ ಸಂದರ್ಭಾನುಸಾರವಾಗಿ ಯಾವೊಬ್ಬ ಸದಸ್ಯನು ತನ್ನ ಪದದ ಸಾಮರ್ಥ್ಯದಲ್ಲಿ ಮಾಡಿದ ಅಥವಾ ಮಾಡಲಾಗಿದೆಯೆಂದು ತಾತ್ಪರ್ಯವಾಗುವ ಯಾವುದೇ ಕಾರ್ಯದ ಸಂಬಂಧದಲ್ಲಿ ಪ್ರಾಧಿಕಾರದ, ಪ್ರಾಧಿಕಾರದ ಅಧ್ಯಕ್ಷನ ಅಥವಾ ಅಂಥ ಸದಸ್ಯನ ವಿರುದ್ಧ, ತುರ್ತು ಅಥವಾ ತಕ್ಷಣದ ಪರಿಹಾರವನ್ನು ಪಡೆಯಲು ಒಂದು ದಾವೆಯನ್ನು (1)ನೇ ಉಪಪ್ರಕರಣದಲ್ಲಿ ಅಗತ್ಯಪಡಿಸಿದ ಯಾವುದೇ ನೋಟೀಸನ್ನು ಜಾರಿ ಮಾಡದೆ, ನ್ಯಾಯಾಲಯದ ಅನುಮತಿಯೊಂದಿಗೆ ಹೂಡಬಹುದು ಆದರೆ ನ್ಯಾಯಾಲಯವು, ದಾವೆಯಲ್ಲಿ ಕೋರಲಾದ ಪರಿಹಾರದ ಸಂಬಂಧದಲ್ಲಿ, ಕಾರಣವನ್ನು ತೋರಿಸುವ ಯುಕ್ತ ಅವಕಾಶವನ್ನು ಪ್ರಾಧಿಕಾರಕ್ಕೆ, ಅಧ್ಯಕ್ಷನಿಗೆ ಅಥವಾ ಸಂದರ್ಭಾನುಸಾರವಾಗಿ ಸದಸ್ಯನಿಗೆ ನೀಡಿದ ಹೊರತು ಮಧ್ಯಂತರ ಅಥವಾ ಅನ್ಯಥಾ ದಾವೆಯಲ್ಲಿ ಪರಿಹಾರವನ್ನು ಮಂಜೂರು ಮಾಡತಕ್ಕದ್ದಲ್ಲ.

50. **ನಿಯಮಗಳ ರಚನಾಧಿಕಾರ.–** (1) ಸರ್ಕಾರವು, ಈ ಅಧಿನಿಯಮದ ಯಾವುದೇ ಅಥವಾ ಎಲ್ಲಾ ಉದ್ದೇಶಗಳನ್ನು ನೆರವೇರಿಸಲು, ಪೂರ್ವ ಪ್ರಕಟಣೆಯ ತರುವಾಯ, ಅಧಿಸೂಚನೆಯ ಮೂಲಕ, ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನ ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಅದು ಅಧಿವೇಶನದಲ್ಲಿದ್ದಾಗ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಿದ ಅಧಿವೇಶನ ಅಥವಾ ಅದರ ನಿಕಟ ತರುವಾಯದ ಅಧಿವೇಶನ ಮುಕ್ತಾಯವಾಗುವ ಮೊದಲು ಉಭಯ ಸದನಗಳು ನಿಯಮದಲ್ಲಿ ಯಾವುದೇ ಮಾರ್ಪಾಡು ಮಾಡಬೇಕೆಂದು ಒಪ್ಪಿದರೆ ಅಥವಾ ಯಾವುದೇ ನಿಯಮ ರಚಿಸಬಾರದೆಂದು ಒಪ್ಪಿದರೆ ಆ ತರುವಾಯ ಸಂದರ್ಭಾನುಸಾರ, ನಿಯಮವು ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಯಾವುದೇ ಪರಿಣಾಮ ಹೊಂದಿರತಕ್ಕದ್ದಲ್ಲ. ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ಧತಿಯು ಆ ನಿಯಮದ ಅಡಿಯಲ್ಲಿ ಮೊದಲು ಮಾಡಿದ ಯಾವುದೇ ಕೃತ್ಯದ ಮಾನ್ಯತೆಗೆ ಬಾಧಕವಾಗತಕ್ಕದ್ದಲ್ಲ.

51. **ವಿನಿಯಮಗಳನ್ನು ರಚಿಸಲು ಅಧಿಕಾರ.–** ಪ್ರಾಧಿಕಾರವು, ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳಿಗೆ ಒಳಪಟ್ಟು ಮತ್ತು ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ, ಪೂರ್ವ ಪ್ರಕಟಣೆಯ ತರುವಾಯ, ಅದರ ಪ್ರಕಾರ್ಯಗಳು, ಅಧಿಕಾರಗಳು ಮತ್ತು ಕರ್ತವ್ಯಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ, ಅಧಿನಿಯಮದ ಉದ್ದೇಶಗಳನ್ನು ನೆರವೇರಿಸಲು, ಅಧಿಸೂಚನೆಯ ಮೂಲಕ ವಿನಿಯಮಗಳನ್ನು ರಚಿಸಬಹುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಬಿ. ಗುಂಜಿಗಾವಿ
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳ ಇಲಾಖೆ

ವಿಶೇಷ ರಾಜ್ಯ ಪತ್ರಿಕೆ

ಭಾಗ– IV-A	ಬೆಂಗಳೂರು, ಶನಿವಾರ, ಸೆಪ್ಟೆಂಬರ್ ೬, ೨೦೧೪ (ಭಾದ್ರಪದ ೧೫, ಶಕ ವರ್ಷ ೧೯೩೬)	ನಂ. ೫೫೫
Part– IV-A	Bangalore, Saturday, September 6, 2014 (Bhadrapada 15, Shaka Varsha 1936)	No. 555

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಂವ್ಯಶಾಇ 5 ಶಾಸನ 2014, ಬೆಂಗಳೂರು, ದಿನಾಂಕ: 06.09.2014

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ(ತಿದ್ದುಪಡಿ) ವಿಧೇಯಕ, 2014 ಇದಕ್ಕೆ 2014ರ ಸೆಪ್ಟೆಂಬರ್ ಎರಡನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2014ರ ಕರ್ನಾಟಕ ಅಧಿನಿಯಮ ಸಂಖ್ಯೆ: 33 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

2014ರ ಕರ್ನಾಟಕ ಅಧಿನಿಯಮ ಸಂಖ್ಯೆ 33

(2014ರ ಸೆಪ್ಟೆಂಬರ್ ತಿಂಗಳ ಆರನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ (ತಿದ್ದುಪಡಿ) ಅಧಿನಿಯಮ, 2014

(2014ರ ಸೆಪ್ಟೆಂಬರ್ ತಿಂಗಳ ಎರಡನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಅಧಿನಿಯಮ, 1995ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಅಧಿನಿಯಮ, 1995ನ್ನು (1995ರ ಕರ್ನಾಟಕ ಅಧಿನಿಯಮ 28) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಅರವತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ (ತಿದ್ದುಪಡಿ) ಅಧಿನಿಯಮ, 2014 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 3ನೇ ಪ್ರಕರಣದ ತಿದ್ದುಪಡಿ.– ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಅಧಿನಿಯಮ, 1995ರ (1995ರ ಕರ್ನಾಟಕ ಅಧಿನಿಯಮ 28) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 3ನೇ ಪ್ರಕರಣದ (2)ನೇ ಉಪಪ್ರಕರಣದ (ಡಿ) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಡಿ) ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ, ಇವರು ಆಯೋಗದ ಸದಸ್ಯ– ಕಾರ್ಯದರ್ಶಿ ಆಗಿರತಕ್ಕದ್ದು."

3. 9ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 9ನೇ ಪ್ರಕರಣದ (1)ನೇ ಉಪಪ್ರಕರಣದ (ii) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ii) ರಾಜ್ಯದ ನಾಗರಿಕರ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗಳ ಬಗ್ಗೆ ಸಮೀಕ್ಷೆ ನಡೆಸುವುದು, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ನಾಗರಿಕರ ವರ್ಗಗಳನ್ನು ಗುರುತಿಸುವುದು ಮತ್ತು ಅವಶ್ಯಕ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು;"

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಬಿ. ಗುಂಜಿಗಾವಿ
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳ ಇಲಾಖೆ

ವಿಶೇಷ ರಾಜ್ಯ ಪತ್ರಿಕೆ

ಭಾಗ– IV-A	ಬೆಂಗಳೂರು, ಶನಿವಾರ, ಸೆಪ್ಟೆಂಬರ್ ೬, ೨೦೧೪ (ಭಾದ್ರಪದ ೧೫, ಶಕ ವರ್ಷ ೧೯೩೬)	ನಂ. ೫೫೬
Part– IV-A	**Bangalore, Saturday, September 6, 2014 (Bhadrapada 15, Shaka Varsha 1936)**	**No. 556**

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಂವ್ಯಶಾಇ 07 ಶಾಸನ 2014, ಬೆಂಗಳೂರು, ದಿನಾಂಕ: 06.09.2014

ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ, 2014 ಕ್ಕೆ 2014ರ ಸೆಪ್ಟೆಂಬರ್ ತಿಂಗಳ ಎರಡನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2014ರ ಕರ್ನಾಟಕ ಅಧಿನಿಯಮ ಸಂಖ್ಯೆ:34 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

2014ರ ಕರ್ನಾಟಕ ಅಧಿನಿಯಮ ಸಂಖ್ಯೆ 34

(2014ರ ಸೆಪ್ಟೆಂಬರ್ ತಿಂಗಳ ಆರನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ, 2014

(2014ರ ಸೆಪ್ಟೆಂಬರ್ ತಿಂಗಳ ಎರಡನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇದರಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ನ್ನು (2000ದ ಕರ್ನಾಟಕ ಅಧಿನಿಯಮ ಸಂಖ್ಯೆ 17) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ,

ಇದು ಭಾರತ ಗಣರಾಜ್ಯದ ಅರವತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ ಎಂದರೆ :–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ 2014 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 2ನೇ ಪ್ರಕರಣದ ತಿದ್ದುಪಡಿ:– ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 (2000ರ ಕರ್ನಾಟಕ ಅಧಿನಿಯಮ ಸಂಖ್ಯೆ 17) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) **2ನೇ ಪ್ರಕರಣದ, ಉಪಪ್ರಕರಣ (ಎ2)ನೇ ಉಪ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–**

"(ಎ2) ' ಹಿಂದುಳಿದ ವರ್ಗಗಳು' ಎಂದರೆ, ಸಹಕಾರಿಗಳ ಮಂಡಲಿಯಲ್ಲಿ ಮೀಸಲಾತಿ ಉದ್ದೇಶಕ್ಕಾಗಿ ಕಾಲಕಾಲಕ್ಕೆ ಸರ್ಕಾರದಿಂದ "ಎ" ಮತ್ತು "ಬಿ" ಪ್ರವರ್ಗಗಳು ಎಂಬುದಾಗಿ ವರ್ಗೀಕರಿಸಬಹುದಾದ ಮತ್ತು ಅಧಿಸೂಚಿಸಬಹುದಾದ ಅಂಥ ವರ್ಗ ಅಥವಾ ವರ್ಗಗಳ ನಾಗರೀಕರು."

3. 4ನೇ ಪ್ರಕರಣದ ತಿದ್ದುಪಡಿ.– 4ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ "ಅಂಥವುಗಳನ್ನು" ಎಂಬ ಪದದ ತರುವಾಯ "ಬೇರೆ ಬೇರೆ ಸಹಕಾರಿಗಳ ನಡುವೆ ಅನಾರೋಗ್ಯಕರ ಸ್ಪರ್ಧೆ ತಪ್ಪಿಸುವ ಸಲುವಾಗಿ ಸಹಕಾರಿಯ ನೋಂದಣಿಗೆ ಸಂಬಂಧಿಸಿದಂತೆ ರಿಜಿಸ್ಟ್ರಾರನು ಕಾಲಕಾಲಕ್ಕೆ ಹೊರಡಿಸುವ ನಿರ್ದೇಶನ, ಸುತ್ತೋಲೆಗಳಿಗೊಳಪಟ್ಟು" ಎಂಬ ಪದಗಳನ್ನು ಸೇರಿಸತಕ್ಕದ್ದು.

4. 11ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 11ನೇ ಪ್ರಕರಣದಲ್ಲಿ,–

(i) (2)ನೇ ಉಪಪ್ರಕರಣದಲ್ಲಿ "ಅಂಚೆಯ ಮೂಲಕ ಕಳುಹಿಸತಕ್ಕದ್ದು" ಎಂಬ ಪದಗಳ ತರುವಾಯ "ಅಥವಾ ಖುದ್ದಾಗಿ ಸಲ್ಲಿಸತಕ್ಕದ್ದು. ವಿಳಂಬವಾಗಿ ಸಲ್ಲಿಸಿರುವ ಸಂದರ್ಭದಲ್ಲಿ, ವಿಳಂಬಕ್ಕೆ ಸಕಾರಣಗಳಿವೆಯೆಂದು ರಿಜಿಸ್ಟಾರನಿಗೆ ಮನದಟ್ಟಾದರೆ, ಅಂತಹ ವಿಳಂಬವನ್ನು ಮನ್ನಿಸಿ, ಉಪವಿಧಿ ತಿದ್ದುಪಡಿ ಪ್ರಸ್ತಾವನೆಯನ್ನು ಪರಿಗಣಿಸಬಹುದು." ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) (3)ನೇ ಉಪಪ್ರಕರಣದ (ಸಿ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು. ಎಂದರೆ:–

"(ಡಿ) ನಿಯಮಿಸಲಾದಂತೆ ನಿಗದಿಪಡಿಸುವ ಶುಲ್ಕವನ್ನು ರಿಜಿಸ್ಟ್ರಾರನ ಹೆಸರಿನಲ್ಲಿ ಖಜಾನೆ ಚಲನ್ ಅಥವಾ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಪಾವತಿಸಿರುವ ದಾಖಲೆ."

5. 17ನೇ ಪ್ರಕರಣದ ತಿದ್ದುಪಡಿ– ಮೂಲ ಅಧಿನಿಯಮದ 17ನೇ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"**17. ನಿಧಿಗಳ ಸಂಗ್ರಹಣೆ.–** ಸಹಕಾರಿಯು ತನ್ನ ಸದಸ್ಯರಿಂದ ತನ್ನ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಅಂಥ ವ್ಯಾಪ್ತಿ ಮತ್ತು ಅಂಥ ಷರತ್ತಿಗಳಿಗೊಳಪಟ್ಟು, ಷೇರು ಬಂಡವಾಳ, ಠೇವಣಿಗಳು, ಡಿಬೆಂಚರುಗಳು, ಸಾಲಗಳು ಮತ್ತು ಇತರ ವಂತಿಗೆಗಳು ಮತ್ತು ನಿಧಿಗಳನ್ನು ಸಂಗ್ರಹಿಸಬಹುದು:

ಪರಂತು, ಒಂದು ಸಹಕಾರಿಯು, ಸರ್ಕಾರದಿಂದ ಅಥವಾ ಸರ್ಕಾರದ ಖಾತರಿಯಿಂದ ಯಾವುದೇ ಸಾಲ, ಸಹಾಯಧನ, ಅನುದಾನ ಅಥವಾ ಯಾವುದೇ ರೂಪದಲ್ಲಿ ಆರ್ಥಿಕ ನೆರವನ್ನು ಪಡೆಯಲು ಅರ್ಹವಾಗಿರತಕ್ಕದಲ್ಲ:

ಮತ್ತು ಪರಂತು, ಮೊದಲನೇ ಪರಂತುಕದಲ್ಲಿ ಇರುವುದಾವುದೂ, ಒಂದು ಸಹಕಾರಿ ಬ್ಯಾಂಕಿಗೆ ಅನ್ವಯವಾಗತಕ್ಕದ್ದಲ್ಲ."

6. 20ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 20ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದಲ್ಲಿ 'ಸ್ಪರ್ಧಾತ್ಮಕವಾಗಿರುವಲ್ಲಿ' ಎಂಬ ಪದಕ್ಕೆ "ಅಥವಾ ಸಮಾನ ಉದ್ದೇಶದ ಇನ್ನೊಂದು ಸಹಕಾರಿಯ ಸದಸ್ಯನಾಗಿರುವಲ್ಲಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

7. 20ಎ ಮತ್ತು 20ಬಿ ಹೊಸ ಪ್ರಕರಣಗಳ ಸೇರ್ಪಡೆ.– ಮೂಲ ಅಧಿನಿಯಮದ 20ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ,–

"20ಎ.– ಸದಸ್ಯತ್ವವನ್ನು ಒಪ್ಪುವುದು ಅಥವಾ ನಿರಾಕರಿಸುವುದು:– ಯಾವೊಬ್ಬ ವ್ಯಕ್ತಿಯು ಸದಸ್ಯತ್ವವನ್ನು ಬಯಸಿ ಯಾವುದೇ ಸಹಕಾರಿಗೆ ಉಪವಿಧಿಗಳಲ್ಲಿ ನಿಗದಿಪಡಿಸಿರುವ ಷೇರು ಹಣ ಮತ್ತು ಶುಲ್ಕ ಪಾವತಿಸಲು ಅರ್ಜಿ ಸಲ್ಲಿಸಿದಾಗ ಅಂತಹ ಅರ್ಜಿಯನ್ನು ಸಂಬಂಧಿಸಿದ ಮಂಡಲಿಯು ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಅರವತ್ತು ದಿನಗಳೊಳಗೆ ಸದಸ್ಯತ್ವವನ್ನು ನೀಡತಕ್ಕದ್ದು ಅಥವಾ ಕಾರಣಗಳೊಂದಿಗೆ ನಿರಾಕರಿಸತಕ್ಕದ್ದು. ಈ ಅವಧಿಯೊಳಗೆ ಅರ್ಜಿದಾರನಿಗೆ ತನ್ನ ಸದಸ್ಯತ್ವ ಕೋರಿಕೆ ಅರ್ಜಿಯ ಬಗ್ಗೆ ಸಂಬಂಧಪಟ್ಟ ಸಹಕಾರಿಯಿಂದ ಯಾವುದೇ ರೀತಿಯ ಆದೇಶ ಬಾರದೇ ಇದ್ದಲ್ಲಿ, ಅಂತಹ ಅರ್ಜಿದಾರನ ಸದಸ್ಯತ್ವದ ಅರ್ಜಿಯನ್ನು ಅಂಥ ಸಹಕಾರಿಯು ಅಂತಹ ಅವಧಿಯ ಕೊನೆಯ ದಿನದಂದು ಅಂಗೀಕರಿಸಿದೆ ಎಂದು ಭಾವಿಸತಕ್ಕದ್ದು. ಒಂದು ವೇಳೆ ನಿರಾಕರಿಸಿದಲ್ಲಿ ಈ ನಿರಾಕರಣೆಯನ್ನು ಪ್ರಶ್ನಿಸಿ ನಿರಾಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ರಿಜಿಸ್ಟ್ರಾರ್‌ನ ಮುಂದೆ ಸಂಬಂಧಿತ ವ್ಯಕ್ತಿಯು ಮೇಲ್ಮನವಿ ಸಲ್ಲಿಸಬಹುದು. ರಿಜಿಸ್ಟ್ರಾರನು ಈ ಮೇಲ್ಮನವಿಯನ್ನು ಇತ್ಯರ್ಥಪಡಿಸಿ ಆದೇಶ ಹೊರಡಿಸತಕ್ಕದ್ದು. ಅಂತಹ ಆದೇಶವನ್ನು ಆ ಆದೇಶ ಹೊರಡಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗೆ ಸಹಕಾರಿಯು ಅನುಷ್ಠಾನಗೊಳಿಸತಕ್ಕದ್ದು.

20ಬಿ.– ಸದಸ್ಯನ ಮತದಾನದ ಹಕ್ಕು:– ಯಾವುದೇ ಸಹಕಾರಿಯ ಮಹಾ ಸಭೆಯ ದಿನಾಂಕದಿಂದ ಅಥವಾ ಸಂದರ್ಭಾನುಸಾರ ಚುನಾವಣಾ ದಿನಾಂಕದಿಂದ ಒಂದು ವರ್ಷ ಪೂರ್ವದಲ್ಲಿ ಸದಸ್ಯರಾದವರಿಗೆ ಮಾತ್ರ ಅಂಥ ಸಹಕಾರಿಯ ಮಹಾ ಸಭೆಯಲ್ಲಿ ಭಾಗವಹಿಸಲು ಮತ್ತು ಮಂಡಲಿ ಚುನಾವಣೆಯಲ್ಲಿ ಮತದಾನ ಮಾಡಲು ಅವಕಾಶ ಇರತಕ್ಕದ್ದು:

ಪರಂತು, ಸಹಕಾರಿಯು ಹೊಸದಾಗಿ ನೋಂದಣಿಗೊಂಡ ತರುವಾಯ ಕೂಡಲೇ ನಡೆಯುವ ಸಹಕಾರಿಯ ಆಡಳಿತ ಮಂಡಲಿಯ ಮೊದಲ ಚುನಾವಣೆಯಲ್ಲಿ ಭಾಗವಹಿಸುವ ಸದಸ್ಯನಿಗೆ ಮತ್ತು ಪ್ರಥಮ ಮಹಾ ಸಭೆಯಲ್ಲಿ ಭಾಗವಹಿಸುವ ಸದಸ್ಯನಿಗೆ ಈ ನಿರ್ಬಂಧವು ಅನ್ವಯಿಸತಕ್ಕದ್ದಲ್ಲ."

8. 21ಎ ಪ್ರಕರಣದ ತಿದ್ದುಪಡಿ:– ಮೂಲ ಅಧಿನಿಯಮದ 21ಎ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದಲ್ಲಿರುವ ಎರಡನೇ ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

9. 21ಬಿ ಹೊಸ ಪ್ರಕರಣದ ಸೇರ್ಪಡೆ.– ಮೂಲ ಅಧಿನಿಯಮದ 21ಎ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"21ಬಿ.– ಸಹ ಸದಸ್ಯತ್ವ:– (1) ಒಂದು ಸಹಕಾರಿಯು,–

(ಎ) ಯಾವೊಬ್ಬ ವ್ಯಕ್ತಿಯನ್ನು, ಅಥವಾ

(ಬಿ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಅಡಿಯಲ್ಲಿ ರಚಿತವಾದ ಯಾವುದೇ ಫರ್ಮು, ಕಂಪನಿ, ಸಹಕಾರ ಸಂಘ, ಸಹಕಾರಿ ಅಥವಾ ಯಾವುದೇ ನಿಕಾಯ ಅಥವಾ ನಿಗಮವನ್ನು,

–ಅಂಥ ಸಹಕಾರಿಯ ಉಪವಿಧಿಯಲ್ಲಿ ನಮೂದಿಸಬಹುದಾದ ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ ಸಹ ಸದಸ್ಯ ಎಂದು ಸೇರಿಸಿಕೊಳ್ಳಬಹುದು:

ಪರಂತು, ಯಾವುದೇ ಸಹಕಾರಿಯ ಸಹ ಸದಸ್ಯರ ಸಂಖ್ಯೆಯು ಅಂಥ ಸಹಕಾರಿಯ ಒಟ್ಟು ಸದಸ್ಯರ ಸಂಖ್ಯೆಯ ಗರಿಷ್ಠ ಶೇಕಡ ಹತ್ತನ್ನು ಮೀರತಕ್ಕದ್ದಲ್ಲ. ಒಂದು ವೇಳೆ ಈಗಾಗಲೇ ಸಹಕಾರಿಯು ತನ್ನ ಒಟ್ಟು ಸದಸ್ಯರ ಸಂಖ್ಯೆಯ ಶೇಕಡ ಹತ್ತಕ್ಕಿಂತ ಹೆಚ್ಚಾಗಿ ಸಹ ಸದಸ್ಯರನ್ನು ಹೊಂದಿದ್ದಲ್ಲಿ, ಅಧಿಕವಾಗಿರುವ ಸಹ ಸದಸ್ಯರನ್ನು ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ, 2014 ಜಾರಿ ಬಂದ ದಿನಾಂಕದಿಂದ ಆರು ತಿಂಗಳೊಳಗೆ ಸಾಮಾನ್ಯ ಸದಸ್ಯರನ್ನಾಗಿ ಮಾಡಿಕೊಳ್ಳತಕ್ಕದ್ದು ಅಥವಾ ಸಹ ಸದಸ್ಯತ್ವದಿಂದ ತೆಗೆದುಹಾಕತಕ್ಕದ್ದು.

(2) ಸಹ ಸದಸ್ಯನು ಸಹಕಾರಿಯ ಷೇರುಗಳನ್ನು ಹೊಂದಿರಬಹುದು ಆದರೆ, ಸಹಕಾರಿಯ ಒಬ್ಬ ಪದಾಧಿಕಾರಿಯಾಗಲು ಅರ್ಹತೆ ಹೊಂದಿರತಕ್ಕದ್ದಲ್ಲ. ಸಹ ಸದಸ್ಯನು ಸಹಕಾರಿಯ ವ್ಯವಸ್ಥಾಪನೆಯಲ್ಲಿ ಭಾಗವಹಿಸಲು ಮತ್ತು ಸಹಕಾರಿಯ ಯಾವುದೇ ಸಭೆಯಲ್ಲಿ ಮತ್ತು ಚುನಾವಣೆಯಲ್ಲಿ ಭಾಗವಹಿಸಲು ಮತ್ತು ಮತ ಚಲಾಯಿಸಲು ಅವಕಾಶವಿರತಕ್ಕದ್ದಲ್ಲ.

(3) ಈ ಪ್ರಕರಣದಲ್ಲಿ ಉಪಬಂಧಿಸಿರುವುದನ್ನುಳಿದು, ಒಬ್ಬ ಸಹ ಸದಸ್ಯನು, ಸಹಕಾರಿಯ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಒಬ್ಬ ಸದಸ್ಯನು ಹೊಂದಿರುವ ಎಲ್ಲಾ ಹಕ್ಕುಗಳಿಗೆ ಮತ್ತು ಸದಸ್ಯನ ಹೊಣೆಗಾರಿಕೆಗಳನ್ನು ಹೊಂದಿರತಕ್ಕದ್ದು."

10. 22ನೇ ಪ್ರಕರಣದ ತಿದ್ದುಪಡಿ– ಮೂಲ ಅಧಿನಿಯಮದ 22ನೇ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ–

"**22. ಸದಸ್ಯೇತರರಿಂದ ಠೇವಣಿ ಸಂಗ್ರಹಣೆಗೆ ನಿರ್ಬಂಧ.–** ಭಾರತೀಯ ರಿಸರ್ವ್ ಬ್ಯಾಂಕಿನಿಂದ, ಬ್ಯಾಂಕಿಂಗ್ ವ್ಯವಹಾರ ನಡೆಸಲು ಪರವಾನಗಿ ಪಡೆದಿರುವ ಸೌಹಾರ್ದ ಸಹಕಾರಿ ಬ್ಯಾಂಕ್‌ಗಳನ್ನು ಹೊರತುಪಡಿಸಿ ಇತರೆ ಯಾವುದೇ ಸಹಕಾರಿಗಳು ನಾಮಮಾತ್ರ ಸದಸ್ಯರು ಸೇರಿದಂತೆ ಇತರೆ ಯಾವುದೇ ಸದಸ್ಯರೇತರರಿಂದ ಠೇವಣಿಯನ್ನು ಸಂಗ್ರಹಿಸತಕ್ಕದ್ದಲ್ಲ".

11. 23ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 23ನೇ ಪ್ರಕರಣದ (3)ನೇ ಉಪಪ್ರಕರಣದ (ಕೆ–4) ಖಂಡನ್ನು ಬಿಟ್ಟುಬಿಡತಕ್ಕದ್ದು.

12. 23ಎ ಪ್ರಕರಣದ ತಿದ್ದುಪಡಿ:– ಮೂಲ ಅಧಿನಿಯಮದ 23ಎ ಪ್ರಕರಣದ ತರುವಾಯ ಈ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು, ಪಟ್ಟಣ ಸಹಕಾರ ಬ್ಯಾಂಕುಗಳು ಶಾಖೆಗಳನ್ನು ತೆರೆಯಲು ಭಾರತೀಯ ರಿಸರ್ವ್ ಬ್ಯಾಂಕಿನಿಂದ ಅನುಮತಿ ಪಡೆದ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಅನುಮತಿ ಅಗತ್ಯವಿಲ್ಲ."

13. 23ಬಿ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 23ಬಿ ಪ್ರಕರಣದ ಕೊನೆಯಲ್ಲಿ ಈ ಮುಂದಿನದನ್ನು ಸೇರಿಸತಕ್ಕದ್ದು, ಅಂದರೆ,–

"ಹೊಸದಾಗಿ ನೋಂದಣಿಯಾಗುವ ಸಹಕಾರಿಗಳ ಉಪವಿಧಿಗಳಲ್ಲಿ ಪ್ರಾತಿನಿಧಿಕ ಸಾಮಾನ್ಯ ನಿಕಾಯವನ್ನು ರಚಿಸಲು ಅವಕಾಶ ಮಾಡಬಹುದು."

14. 24ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 24ನೇ ಪ್ರಕರಣದಲ್ಲಿ–

(i) "ಹೆಚ್ಚಿಲ್ಲದ" ಎಂಬ ಪದದ ತರುವಾಯ "ಚುನಾಯಿತ" ಎಂಬ ಪದವನ್ನು ಸೇರಿಸತಕ್ಕದ್ದು.

(ia) "ಒಂದನೇ ಪರಂತುಕದಲ್ಲಿ, "ಹಿಂದುಳಿದ ವರ್ಗದವರ ಎಂಬ ಪದಗಳ ತರುವಾಯ" ನಿಗದಿಪಡಿಸಿದ ರೀತಿಯಲ್ಲಿ "ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) (1)ನೇ ಉಪಪ್ರಕರಣದ, ನಾಲ್ಕನೇ ಪರಂತುಕದಲ್ಲಿ "ಆಡಳಿತ ಮಂಡಲಿಯ" ಎಂಬ ಪದಗಳಿಗೆ ಮೊದಲು ",ಅವಶ್ಯವಿದ್ದಲ್ಲಿ," ಎಂಬ ಪದವನ್ನು ಮತ್ತು ಅಲ್ಪ ವಿರಾಮ ಚಿಹ್ನೆಗಳನ್ನು ಸೇರಿಸತಕ್ಕದ್ದು.

(iii) (2)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(2) ಈ ಅಧಿನಿಯಮದಲ್ಲಿ ಅನ್ಯಥಾ ಅಗತ್ಯಪಡಿಸದ ಹೊರತು ಚುನಾಯಿತ ನಿರ್ದೇಶಕರುಗಳ ಪದಾವಧಿಯು ಚುನಾವಣೆ ನಡೆದ ದಿನಾಂಕದಿಂದ ಐದು ವರ್ಷಗಳಾಗಿರತಕ್ಕದ್ದು:

ಪರಂತು, ಸಂಯುಕ್ತ ಸೌಹಾರ್ದ ಸಹಕಾರಿಯ ನಿರ್ದೇಶಕತ್ವದ ಅಧಿಕಾರಾವಧಿಯು ಪ್ರತಿನಿಧಿಸಲ್ಪಡುವ ಸಹಕಾರಿಯ ಆಡಳಿತ ಮಂಡಲಿಯ ಅಧಿಕಾರಾವಧಿಯೊಂದಿಗೆ ಅಂತ್ಯವಾಗತಕ್ಕದ್ದು."

15. 25ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 25ನೇ ಪ್ರಕರಣದಲ್ಲಿ–

(1) (1)ನೇ ಉಪಪ್ರಕರಣದಲ್ಲಿ ಖಂಡ (ಎಫ್) ದಲ್ಲಿ "ಅನರ್ಹತೆಗೆ ಗುರಿಯಾದ ದಿನಾಂಕದಿಂದ" ಎಂಬ ಪದಗಳ ನಂತರ "ಗರಿಷ್ಠ" ಎಂಬ ಪದವನ್ನು ಸೇರಿಸತಕ್ಕದ್ದು.

(2) (2)ನೇ ಉಪಪ್ರಕರಣದಲ್ಲಿ,– (i) (ಎ) ಖಂಡದಲ್ಲಿ "ಅಥವಾ ತತ್ಪರಿಣಾಮವಾಗಿ ಅಥವಾ ಅನ್ಯಥಾ ಯಾವುದೇ ಕಾರಣದಿಂದ ಸಹಕಾರ ಚುನಾವಣಾ ಪ್ರಾಧಿಕಾರವು ನಿಗದಿತ ಅವಧಿಯೊಳಗೆ ಚುನಾವಣೆಗಳನ್ನು ನಡೆಸದಿದ್ದರೆ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

(ii) "ಅನರ್ಹತೆಗೆ ಗುರಿಯಾದ ದಿನಾಂಕದಿಂದ" ಎಂಬ ಪದಗಳ ನಂತರ "ಗರಿಷ್ಠ"ಎಂಬ ಪದವನ್ನು ಸೇರಿಸತಕ್ಕದ್ದು.

16. 26ನೇ ಪ್ರಕರಣದ ತಿದ್ದುಪಡಿ:– ಮೂಲ ಅಧಿನಿಯಮದ 26ನೇ ಪ್ರಕರಣದ (4)ನೇ ಉಪಪ್ರಕರಣವನ್ನು ಪರಂತುಕದ ಸಹಿತ ಬಿಟ್ಟುಬಿಡತಕ್ಕದ್ದು.

17. 28ನೇ ಪ್ರಕರಣದ ತಿದ್ದುಪಡಿ:– ಮೂಲ ಅಧಿನಿಯಮದ 28ನೇ ಪ್ರಕರಣದ (3)ನೇ ಉಪಪ್ರಕರಣದ ತರುವಾಯ ಈ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು, ಸಂಯುಕ್ತ ಸೌಹಾರ್ದ ಸಹಕಾರಿಯ ಪದಾಧಿಕಾರಿಯ ಅಧಿಕಾರಾವಧಿಯು ಪ್ರತಿನಿಧಿಸಲ್ಪಡುವ ಸಹಕಾರಿಯ ಆಡಳಿತ ಮಂಡಲಿಯ ಅಧಿಕಾರಾವಧಿಯೊಂದಿಗೆ ಅಂತ್ಯವಾಗತಕ್ಕದ್ದು."

18. 28ಎ ಹೊಸ ಪ್ರಕರಣದ ಸೇರ್ಪಡೆ.– ಮೂಲ ಅಧಿನಿಯಮದ 28ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು. ಎಂದರೆ:–

"28ಎ.– ಸಹಕಾರಿಯ ಮಂಡಲಿಯ ಸದಸ್ಯ ಅಥವಾ ಪದಾಧಿಕಾರಿಯ ರಾಜೀನಾಮೆ– ಸಹಕಾರಿಯ ಮಂಡಲಿ ಸದಸ್ಯನು ಅಥವಾ ಪದಾಧಿಕಾರಿಯು ಮಂಡಲಿಯ ತನ್ನ ಸದಸ್ಯತ್ವಕ್ಕೆ ಅಥವಾ ಸಂದರ್ಭಾನುಸಾರವಾಗಿ ಪದಾಧಿಕಾರಿ ಹುದ್ದೆಗೆ ತನ್ನ ಸ್ವಹಸ್ತ ಬರಹದ ಮೂಲಕ ರಾಜೀನಾಮೆಯನ್ನು ಮುಖ್ಯ ಕಾರ್ಯನಿರ್ವಾಹಕನಿಗೆ ನೀಡಬಹುದು. ಮತ್ತು ರಾಜೀನಾಮೆ ನೀಡಿದ ದಿನಾಂಕದಿಂದ ಹದಿನೈದು ದಿನಗಳೊಳಗೆ ತನ್ನ ಸ್ವಹಸ್ತಬರಹದ ಮೂಲಕ ಅಂತಹ ರಾಜೀನಾಮೆಯನ್ನು ಮುಖ್ಯ ಕಾರ್ಯನಿರ್ವಾಹಕನಿಗೆ ಹಿಂಪಡೆಯಲು ಪತ್ರವನ್ನು ನೀಡದ ಹೊರತು, ರಾಜೀನಾಮೆ ನೀಡಿದ ದಿನಾಂಕದಿಂದ ಹದಿನೈದು ದಿನಗಳು ಮುಗಿದ ನಂತರ ಆತನ ಸ್ಥಾನವು ಅಥವಾ ಸಂದರ್ಭಾನುಸಾರವಾಗಿ ಹುದ್ದೆಯು ತೆರವಾಗತಕ್ಕದ್ದು. ಮುಖ್ಯ ಕಾರ್ಯನಿರ್ವಾಹಕನು ರಾಜೀನಾಮೆ ಪತ್ರ ನೀಡಿದ ನಂತರ ಸಮಾವೇಶಗೊಳ್ಳುವ ಮಂಡಲಿಯ ಸಭೆಯ ಮುಂದಿಡತಕ್ಕದ್ದು".

19. 30ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 30ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿ "ಶೇಕಡ ಇಪ್ಪತ್ತಕ್ಕಿಂತ ಕಡಿಮೆ ಇರತಕ್ಕದ್ದಲ್ಲ" ಎಂಬ ಪದಗಳಿಗೆ "ಶೇಕಡ ಹತ್ತು ಅಥವಾ ಒಂದು ಸಾವಿರ, ಇವೆರಡರಲ್ಲಿ ಯಾವುದು ಕಡಿಮೆಯೋ ಆ ಸಂಖ್ಯೆಯು ಕೋರಂ ಆಗಿರತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

20. 33ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 33ನೇ ಪ್ರಕರಣದಲ್ಲಿ–

(1) ಶಿರೋನಾಮೆಯಲ್ಲಿ "ಲೆಕ್ಕಪರಿಶೋಧನೆ" ಎಂಬ ಪದಕ್ಕೆ "ಸಹಕಾರಿಯ ಲೆಕ್ಕಪರಿಶೋಧನೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಎರಡನೇ ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

(3) (2)ನೇ ಉಪಪ್ರಕರಣದ ತರುವಾಯ ಈ ಮುಂದಿನ ಪರಂತುಕಗಳನ್ನು ಸೇರಿಸತಕ್ಕದ್ದು. ಎಂದರೆ–

"ಪರಂತು, ಯಾವ ಸಹಕಾರಿಯು ಸಹಕಾರಿ ವರ್ಷದ ಲೆಕ್ಕಪರಿಶೋಧನೆಯನ್ನು ಮಾಡಿಸಲು ಮಹಾ ಸಭೆಯಲ್ಲಿ ಲೆಕ್ಕಪರಿಶೋಧಕನನ್ನು ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯನ್ನು ನೇಮಿಸಲು ಮತ್ತು ನಿಯಮಾನುಸಾರ ತಿಳಿಸಲು ವಿಫಲವಾಗಿದೆಯೆಂದು ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕನಿಗೆ ಮನದಟ್ಟಾದಲ್ಲಿ, ಸಂಬಂಧಿತ ಸಹಕಾರಿಗೆ ಲಿಖಿತ ಹೇಳಿಕೆ ನೀಡಲು ಅವಕಾಶ ನೀಡಿದ ತರುವಾಯ ಹಾಗೂ ನೇಮಕ ಮಾಡಿಲ್ಲದಿರುವುದನ್ನು ಖಚಿತಪಡಿಸಿಕೊಂಡ ನಂತರ ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕನು ಲೆಕ್ಕಪರಿಶೋಧಕರ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಗಳ ಅನುಮೋದಿತ ಪಟ್ಟಿಯೊಳಗಿನಿಂದ ಲೆಕ್ಕಪರಿಶೋಧನೆ ಮಾಡಲು ವಿಫಲವಾದ ಅಂಥ ಸಹಕಾರಿಯ ಸಂಬಂಧಿತ ವರ್ಷದ ಲೆಕ್ಕಪರಿಶೋಧನೆಗೆ ಲೆಕ್ಕಪರಿಶೋಧಕ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯನ್ನು ನೇಮಿಸಬಹುದು ಹಾಗೂ ಸದರಿ ಲೆಕ್ಕಪರಿಶೋಧಕ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯು ಆ ನಿರ್ದಿಷ್ಟ ವರ್ಷಕ್ಕೆ ಆ ಸಹಕಾರಿಯ ಲೆಕ್ಕಪರಿಶೋಧಕರೆಂದು ಪರಿಗಣಿಸತಕ್ಕದ್ದು:

ಮತ್ತು ಪರಂತು, ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕನು ನಿರ್ವಹಿಸುವ ಲೆಕ್ಕಪರಿಶೋಧಕರ ಪಟ್ಟಿಯಲ್ಲಿ ನಮೂದಿಸಿರುವ ಸರ್ಕಾರಿ ಲೆಕ್ಕಪರಿಶೋಧಕರ ಸಂದರ್ಭದಲ್ಲಿ ಅವರನ್ನು ಪದನಾಮ ಮಾತ್ರದಿಂದಲೇ ನಮೂದಿಸತಕ್ಕದ್ದು. ಮತ್ತು ಸಹಕಾರಿಯು ಇಂತಹ ಲೆಕ್ಕಪರಿಶೋಧಕರ ಪಟ್ಟಿಯಿಂದ ಸರ್ಕಾರಿ ಲೆಕ್ಕಪರಿಶೋಧಕರನ್ನು ಆಯ್ಕೆ ಮಾಡಿಕೊಂಡಲ್ಲಿ ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕನಿಗೆ ತಿಳಿಸತಕ್ಕದ್ದು".

(4) (19)ನೇ ಉಪಪ್ರಕರಣ ಮತ್ತು ನಂತರ ಇರುವ ವಿವರಣೆಗಳಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು. ಎಂದರೆ:–

"(19) ಯಾವುದೇ ಸಹಕಾರಿಯ ಲೆಕ್ಕಪರಿಶೋಧಕನ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯ ಸಂಭಾವನೆಯನ್ನು, ಸಹಕಾರಿಯ ದುಡಿಯುವ ಬಂಡವಾಳ ಮತ್ತು ವಹಿವಾಟಿನ ಆಧಾರದ ಮೇಲೆ, ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕನು ಕಾಲಕಾಲಕ್ಕೆ ನೀಡುವ ಮಾರ್ಗಸೂಚಿಗಳ ರೀತ್ಯಾ ಅದರ ಸಾಮಾನ್ಯ ನಿಕಾಯವು ನಿಗದಿಪಡಿಸುವ ದರದಲ್ಲಿ ಸಹಕಾರಿಯು ಭರಿಸತಕ್ಕದ್ದು.

(20) ಮೇಲಿನ ಉಪಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದರೂ, ರಾಜ್ಯ ಸರ್ಕಾರದ ಅನುಮೋದನೆಗೆ ಒಳಪಟ್ಟು ಸಹಕಾರಿಯ ಹಿಂದಿನ ಮೂರು ವರ್ಷಗಳ ಲೆಕ್ಕಪರಿಶೋಧನಾ ಲೆಕ್ಕಪತ್ರಗಳಿಗೆ ಸಂಬಂಧಪಟ್ಟಂತೆ ನಿರ್ದಿಷ್ಟ ಲೆಕ್ಕಪರಿಶೋಧಿತ ಖಾತೆ ಅಥವಾ ಲೆಕ್ಕಪರಿಶೋಧಿತ ಲೆಕ್ಕಗಳನ್ನು ಮರುಪರಿಶೀಲನೆ ಅಥವಾ ಮರುಸತ್ಯಾಪನೆ ಮಾಡುವ ಅಧಿಕಾರವು ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕನಿಗೆ ಇರತಕ್ಕದ್ದು ಹಾಗೂ ಸಂಬಂಧಿತ ಲೆಕ್ಕಪರಿಶೋಧಕರಿಗೆ ಮರುಪರಿಶೀಲನೆ ಅಥವಾ ಮರುಸತ್ಯಾಪನೆ ಸಂದರ್ಭದಲ್ಲಿ ಕಂಡುಬಂದ ಲೋಪದೋಷಗಳನ್ನು ಮುಂದಿನ ವರ್ಷದ ಲೆಕ್ಕಪರಿಶೋಧನಾ ವರದಿಯಲ್ಲಿ ಸೇರ್ಪಡೆಗೊಳಿಸಲು ಸೂಚಿಸಬಹುದು.

ವಿವರಣೆ: ಈ ಪ್ರಕರಣದ ಉದ್ದೇಶಕ್ಕಾಗಿ,–

(i) **'ಲೆಕ್ಕಪರಿಶೋಧಕ'** ಎಂದರೆ, ತನ್ನ ಪದವಿ ಅಥವಾ ಸ್ನಾತಕೋತ್ತರ ಪದವಿಯ ಜೊತೆಗೆ ಸಹಕಾರಿ ವ್ಯವಸ್ಥಾಪನೆಯಲ್ಲಿ ಉನ್ನತ ಡಿಪ್ಲೋಮಾ ಅಥವಾ ಸಹಕಾರಿ ಲೆಕ್ಕಪರಿಶೋಧನೆಯಲ್ಲಿ ಡಿಪ್ಲೋಮಾ ಅಥವಾ ಸಹಕಾರಿ ವ್ಯವಸ್ಥಾಪನೆಯಲ್ಲಿ ಸಾಮಾನ್ಯ

ಡಿಪ್ಲೋಮಾದಲ್ಲಿ ತೇರ್ಗಡೆಯಾಗಿರುವ ಮತ್ತು ಪ್ರೊಬೇಷನರಿ ಅವಧಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುವ ಕನ್ನಡ ಭಾಷೆಯ ವ್ಯವಹಾರ ಜ್ಞಾನವುಳ್ಳ ಸಹಕಾರ ಲೆಕ್ಕಪರಿಶೋಧನಾ ಇಲಾಖೆಯ ಒಬ್ಬ ಲೆಕ್ಕಪರಿಶೋಧಕ ಅಥವಾ ಒಬ್ಬ ಅಧಿಕಾರಿ;

ಅಥವಾ ಕೊನೇ ಪಕ್ಷ ಮೂರು ವರ್ಷಗಳ ಲೆಕ್ಕಪರಿಶೋಧನೆ ಮಾಡಿರುವ ಅನುಭವವುಳ್ಳ ಮತ್ತು ಸಹಕಾರಿ ಸಂಸ್ಥೆಗಳ ಕಾರ್ಯನಿರ್ವಹಣೆ ಬಗ್ಗೆ ಸಾಮಾನ್ಯ ತಿಳುವಳಿಕೆಯುಳ್ಳ ಹಾಗೂ ಪಟ್ಟಿಯಲ್ಲಿ ಸೇರ್ಪಡೆಯಾಗುವ ಇಚ್ಛೆವುಳ್ಳ ಚಾರ್ಟರ್ಡ್ ಲೆಕ್ಕಿಗರ ಅಧಿನಿಯಮ, 1949ರ ಅರ್ಥ ವಿವರಣೆಯಲ್ಲಿ ಬರುವ ಒಬ್ಬ ಸನ್ನದು ಲೆಕ್ಕಿಗ ಅಥವಾ ಕಾಸ್ಟ್ ಮತ್ತು ವರ್ಕ್ಸ್ ಅಕೌಂಟೆಂಟ್ ಅಧಿನಿಯಮ 1959 ರಲ್ಲಿ ಅರ್ಥೈಸಿರುವಂತೆ, ಸಹಕಾರಿ ಸಂಸ್ಥೆಗಳ ಕಾರ್ಯನಿರ್ವಹಣೆ ಬಗ್ಗೆ ವಿಸ್ತೃತ ಜ್ಞಾನವುಳ್ಳ ಸಹಕಾರಿಯ ಲೆಕ್ಕಪರಿಶೋಧನೆಯಲ್ಲಿ ಪರಿಣಿತನಾಗಿರುವ, ಕನಿಷ್ಠ ಮೂರು ವರ್ಷಗಳ ಲೆಕ್ಕಪರಿಶೋಧನೆ ಅನುಭವವುಳ್ಳ ಮತ್ತು ಕನ್ನಡ ಭಾಷಾಜ್ಞಾನವುಳ್ಳ ವೆಚ್ಚಲೆಕ್ಕಿಗ (Cost Accountant) ಹಾಗೂ ಅಂತಹ ಸನ್ನದು ಲೆಕ್ಕಿಗನು ಅಥವಾ ವೆಚ್ಚ ಲೆಕ್ಕಿಗನು ಕಾರ್ಯನಿರ್ವಹಣೆಗೆ ಸಾಕಾಗುವಷ್ಟು ಕನ್ನಡ ಭಾಷೆಯ ಜ್ಞಾನ ಹಾಗೂ ತಿಳುವಳಿಕೆಯನ್ನು ಹೊಂದಿರತಕ್ಕದ್ದು.

(ii) **"ಲೆಕ್ಕಪರಿಶೋಧಿಸುವ ಸಂಸ್ಥೆ"** ಎಂದರೆ, ಕೊನೇ ಪಕ್ಷ ಮೂರು ವರ್ಷಗಳ ಲೆಕ್ಕಪರಿಶೋಧನೆ ಮಾಡಿರುವ ಅನುಭವವುಳ್ಳ ಮತ್ತು ಸಹಕಾರಿ ಸಂಸ್ಥೆಗಳ ಕಾರ್ಯನಿರ್ವಹಣೆ ಬಗ್ಗೆ ಸಾಮಾನ್ಯ ತಿಳುವಳಿಕೆಯುಳ್ಳ ಹಾಗೂ ಪಟ್ಟಿಯಲ್ಲಿ ಸೇರ್ಪಡೆಯಾಗುವ ಇಚ್ಛೆವುಳ್ಳ ಚಾರ್ಟರ್ಡ್ ಲೆಕ್ಕಿಗರ ಅಧಿನಿಯಮ 1949 ರ ಅರ್ಥ ವಿವರಣೆಯಲ್ಲಿ ಬರುವ ಒಬ್ಬರಿಗಿಂತ ಹೆಚ್ಚಿನ ಚಾರ್ಟರ್ಡ್ ಲೆಕ್ಕಿಗರ ಒಂದು ಸಂಸ್ಥೆ ಅಥವಾ ಕಾಸ್ಟ್ ಮತ್ತು ವರ್ಕ್ಸ್ ಅಕೌಂಟೆಂಟ್ ಅಧಿನಿಯಮ 1959 ರಲ್ಲಿ ಅರ್ಥೈಸಿರುವಂತೆ, ಒಂದಕ್ಕಿಂತ ಹೆಚ್ಚಿನ ವೆಚ್ಚ ಲೆಕ್ಕಿಗರನ್ನೊಳಗೊಂಡ ಸಂಸ್ಥೆ ಹಾಗೂ ಅಂತಹ ಚಾರ್ಟರ್ಡ್ ಲೆಕ್ಕಿಗರು ಅಥವಾ ವೆಚ್ಚಲೆಕ್ಕಿಗರು ಕಾರ್ಯನಿರ್ವಹಣೆಗೆ ಸಾಕಾಗುವಷ್ಟು ಕನ್ನಡ ಭಾಷೆಯ ಜ್ಞಾನ ಹಾಗೂ ತಿಳುವಳಿಕೆಯನ್ನು ಹೊಂದಿರತಕ್ಕದ್ದು."

21. 35ನೇ ಪ್ರಕರಣದ ತಿದ್ದುಪಡಿ:– ಮೂಲ ಅಧಿನಿಯಮದ 35ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ (1)ನೇ ಖಂಡದಲ್ಲಿ "ಉಲ್ಲೇಖಿಸಲಾದ ಸ್ವರೂಪದ ವಿಚಾರಣೆಯನ್ನು" ಎಂಬ ಪದಗಳ ತರುವಾಯ "ಈ ಕೆಳಕಂಡ ಸನ್ನಿವೇಶಗಳಲ್ಲೂ ತ್ವರಿತವಾಗಿ ವಿಚಾರಣೆ ನಡೆಸಬಹುದು ಅಥವಾ ನಡೆಸುವಂತೆ ಮಾಡಬಹುದು" ಎಂಬ ಪದಗಳನ್ನು ಸೇರಿಸತಕ್ಕದ್ದು.

22. 37ನೇ ಪ್ರಕರಣದ ತಿದ್ದುಪಡಿ:– ಮೂಲ ಅಧಿನಿಯಮದ 37ನೇ ಪ್ರಕರಣದ ಕೊನೆಯಲ್ಲಿ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"ಸಾಮಾನ್ಯ ನಿಕಾಯ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲು ವಿಫಲವಾದಲ್ಲಿ ರಿಜಿಸ್ಟ್ರಾರನು ತಪ್ಪಿತಸ್ಥರ ವಿರುದ್ಧ ಜರುಗಿಸಬೇಕಾದ ಕ್ರಮಗಳ ಬಗ್ಗೆ ನಿರ್ದೇಶನ ನೀಡತಕ್ಕದ್ದು ಹಾಗೂ ಲೋಪದೋಷಗಳು ಸರಿಪಡಿಸುವವರೆಗೂ ಅನುಪಾಲನಾ ಕ್ರಮ ಜಾರಿಗೊಳಿಸತಕ್ಕದ್ದು."

23. 38ಎ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 38ಎ ಪ್ರಕರಣದ (1)ನೇ ಉಪಪ್ರಕರಣದಲ್ಲಿ **"ಎಲ್ಲಾ ನಿರ್ದೇಶಕರು ರಾಜೀನಾಮೆ ಕೊಟ್ಟಲ್ಲಿ"** ಎಂಬ ಪದಗಳ ನಂತರ **"ಅಥವಾ ಮಂಡಲಿಯ ಪದಾವಧಿ ಮುಕ್ತಾಯವಾಗಿದ್ದು, ನೂತನ ಮಂಡಲಿಯು ರಚನೆಯಾಗಿಲ್ಲದಿದ್ದಲ್ಲಿ"** ಎಂಬ ಪದಗಳನ್ನು ಸೇರಿಸತಕ್ಕದ್ದು.

24. 39ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 39ನೇ ಪ್ರಕರಣದಲ್ಲಿ,–

(i) (1)ನೇ ಉಪಪ್ರಕರಣದಲ್ಲಿ "ವಿವಾದವನ್ನು ಹೊರತುಪಡಿಸಿ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

(ii) (4) ಮತ್ತು (5)ನೇ ಉಪಪ್ರಕರಣಗಳನ್ನು ಬಿಟ್ಟುಬಿಡತಕ್ಕದ್ದು.

25. 43ಎ ಹೊಸ ಪ್ರಕರಣದ ಸೇರ್ಪಡೆ.– ಮೂಲ ಅಧಿನಿಯಮದ 43ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು. ಎಂದರೆ:–

"43ಎ ಶುಲ್ಕಗಳು:– ಸಹಕಾರಿಯು ಇತ್ಯರ್ಥಕ್ಕೆ ಸಲ್ಲಿಸುವ ವ್ಯಾಜ್ಯ ಪ್ರಕರಣಗಳು ಹಾಗೂ ಈ ಅಧಿನಿಯಮದಡಿಯಲ್ಲಿ ಹೊರಡಿಸಲಾದ ಆದೇಶಗಳನ್ನು ಜಾರಿಗೊಳಿಸುವ ಮತ್ತು ವ್ಯಾಜ್ಯಗಳ ಸಂಬಂಧದಲ್ಲಿ ಅರ್ಜಿಗಳೊಂದಿಗೆ ಪಾವತಿಸಬೇಕಾದ ಶುಲ್ಕದ ಮೊತ್ತವನ್ನು ಸಹಕಾರಿಗಳ ರಿಜಿಸ್ಟ್ರಾರನು ಕಾಲಕಾಲಕ್ಕೆ ಅಧಿಸೂಚಿಸತಕ್ಕದ್ದು."

26. 46ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 46ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು.

"ಪರಂತು, ಹಣಪಾವತಿಗೆ ಸಂಬಂಧಿಸಿದ ಯಾವುದೇ ಆದೇಶ ಅಥವಾ ತೀರ್ಪು ಅಥವಾ ಐತೀರ್ಪಿನ ವಿರುದ್ಧ ಸಲ್ಲಿಸುವ ಮೇಲ್ಮನವಿ ಜೊತೆಯಲ್ಲಿ ಅಂತಹ ಆದೇಶದ, ತೀರ್ಪಿನ ಅಥವಾ ಐತೀರ್ಪಿನ ಪ್ರಕಾರ ಬಾಕಿಯಿರುವ ಅಥವಾ ಪಾವತಿಸಬೇಕಿರುವ ಮೊತ್ತದ ಶೇಕಡ ಇಪ್ಪತ್ತೈದನ್ನು ಸಂಬಂಧಿತ ಸಹಕಾರಿಯಲ್ಲಿ ಠೇವಣಿ ಮಾಡಿರುವ ಬಗ್ಗೆ ತೃಪ್ತಿಕರವಾದ ರುಜುವಾತನ್ನು ಸಲ್ಲಿಸದ ಹೊರತು ಮೇಲ್ಮನವಿ ಪ್ರಾಧಿಕಾರವು ಅಂತಹ ಯಾವುದೇ ಮೇಲ್ಮನವಿಯನ್ನು ಪರಿಗಣಿಸತಕ್ಕದ್ದಲ್ಲ. ಮೇಲ್ಮನವಿಯನ್ನು ಇತ್ಯರ್ಥಗೊಳಿಸಿದ ನಂತರ ಆ ರೀತಿ ಠೇವಣಿ ಮಾಡಿರುವ ಮೊತ್ತವನ್ನು ಮೇಲ್ಮನವಿದಾರನು ಪಾವತಿಸಬೇಕಾದ ಮೊಬಲಗಿನೊಂದಿಗೆ ಹೊಂದಾಣಿಕೆ ಮಾಡತಕ್ಕದ್ದು ಮತ್ತು ಮೇಲ್ಮನವಿದಾರನು ಯಾವುದೇ ಮೊಬಲಗನ್ನು ಪಾವತಿಸ ಬೇಕಾಗಿಲ್ಲದ ಸಂದರ್ಭದಲ್ಲಿ ಠೇವಣಿ ಮಾಡಿರುವ ಮೊತ್ತವನ್ನು ಸಹಕಾರಿಯು ಅವನಿಗೆ ಹಿಂತಿರುಗಿಸತಕ್ಕದ್ದು."

27. 53ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 53ನೇ ಪ್ರಕರಣದ (9)ನೇ ಉಪಪ್ರಕರಣದಲ್ಲಿ **"ಪ್ರತಿನಿಧಿ"** ಎಂಬ ಪದವು ಬರುವ ಕಡೆಗಳಲ್ಲೆಲ್ಲ **"ಡೆಲಿಗೇಟ್"** ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

28. 53ಬಿ ಹೊಸ ಪ್ರಕರಣದ ಸೇರ್ಪಡೆ:– ಮೂಲ ಅಧಿನಿಯಮದ 53ಎ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು–

"**53ಬಿ. ನಿರ್ದೇಶಕರುಗಳ ಅನರ್ಹತೆ.–** ಸಂಯುಕ್ತ ಸಹಕಾರಿಯು ಅಧಿನಿಯಮ, ನಿಯಮ ಅನುಸಾರವಾಗಿ ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ವಿಫಲವಾದಲ್ಲಿ ಸೂಕ್ತ ವಿಚಾರಣೆಯ ನಂತರ ಅಂಥ ವಿಫಲತೆಗೆ ಕಾರಣರಾದವರಿಗೆ ಅಹವಾಲು ಸಲ್ಲಿಸಲು ಅವಕಾಶ ನೀಡಿದ ತರುವಾಯ ರಿಜಿಸ್ಟ್ರಾರನು ಅವರನ್ನು ಅನರ್ಹಗೊಳಿಸತಕ್ಕದ್ದು:

ಪರಂತು, ಶೂನ್ಯಾವಸ್ಥೆವುಂಟಾದಲ್ಲಿ ಅಧಿನಿಯಮದ 38ಎ ಪ್ರಕರಣವನ್ನು ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯಿಸತಕ್ಕದ್ದು."

29. 55ನೇ ಪ್ರಕರಣದ ತಿದ್ದುಪಡಿ .– ಮೂಲ ಅಧಿನಿಯಮದ 55ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿ "30ನೇ ಪ್ರಕರಣದ (6) ಮತ್ತು (7) ಉಪಪ್ರಕರಣಗಳ ಉಪಬಂಧಗಳು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

30. 64ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 64ನೇ ಪ್ರಕರಣದ ಶಿರೋನಾಮೆಯಲ್ಲಿ "ಲೆಕ್ಕಪರಿಶೋಧನೆ" ಎಂಬ ಪದಕ್ಕೆ "ಸಂಯುಕ್ತ ಸಹಕಾರಿಯ ಲೆಕ್ಕಪರಿಶೋಧನೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

31. 70ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 70ನೇ ಪ್ರಕರಣದಲ್ಲಿ "ತೊಂದರೆ ಉಂಟಾದರೆ" ಎಂಬ ಪದಗಳ ತರುವಾಯ "ಅಥವಾ ಸ್ಪಷ್ಟೀಕರಣದ ಅವಶ್ಯವಿದ್ದರೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಬಿ. ಗುಂಜಿಗಾವಿ
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳ ಇಲಾಖೆ

ವಿಶೇಷ ರಾಜ್ಯ ಪತ್ರಿಕೆ

ಭಾಗ– IV-A	**ಬೆಂಗಳೂರು, ಶನಿವಾರ, ಸೆಪ್ಟೆಂಬರ್ ೬, ೨೦೧೪ (ಭಾದ್ರಪದ ೧೫, ಶಕ ವರ್ಷ ೧೯೩೬)**	**ನಂ. ೫೫೭**
Part– IV-A	**Bangalore, Saturday, September 6, 2014 (Bhadrapada 15, Shaka Varsha 1936)**	**No. 557**

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಂವ್ಯಶಾಇ 58 ಶಾಸನ 2014, ಬೆಂಗಳೂರು, ದಿನಾಂಕ: 06.09.2014

ದಿ ಕರ್ನಾಟಕ ಕೋ–ಆಪರೇಟಿವ್ ಸೊಸೈಟೀಸ್ (ಅಮೆಂಡ್‌ಮೆಂಟ್) ಬಿಲ್, 2014ಕ್ಕೆ 2014ರ ಸೆಪ್ಟೆಂಬರ್ ತಿಂಗಳ ಎರಡನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2014ರ ಕರ್ನಾಟಕ ಅಧಿನಿಯಮ ಸಂಖ್ಯೆ:35 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

KARNATAKA ACT NO. 35 OF 2014

(First published in the Karnataka Gazette Extra-ordinary on the sixth day of September, 2014)

THE KARNATAKA CO-OPERATIVE SOCIETIES (AMENDMENT) ACT, 2014

(Received the assent of the Governor on the second day of September, 2014)

An Act further to amend the Karnataka Co-operative Societies Act, 1959.

Whereas it is expedient further to amend the Karnataka Co-operative Societies Act, 1959 (Karnataka Act No.11 of 1959) for the purposes hereinafter appearing;

Be it enacted by the Karnataka State Legislature in the sixty-fifth year of the Republic of India as follows :-

1. Short title and commencement.- (1) This Act may be called the Karnataka Co-operative Societies (Amendment) Act, 2014.

(2) It shall come into force at once.

2. Amendment of section 2.- In the Karnataka Co-operative Societies Act, 1959 (Karnataka Act 11 of 1959) (hereinafter referred to as the principal Act), in section 2,-

(i) for clause (a-2-1), the following shall be substituted, namely:-

"(a-2-1) **Backward Classes** means such class or classes of citizens as may be classified as category "A" and "B" and notified by the Government from time to time for the purpose of reservation in the board of cooperative societies."

(ii) for clause (b-5), the following shall be substituted, namely:-

(b-5) "Cooperative Election Authority' means the 'Co-operative Election authority constituted under section 39AA;"

(iii) after clause (e-1), the following shall be inserted, namely:-

"(e-1-a) delegate means a member of the board of a Co-operative society appointed by the board to represent that Co-operative Society in other co-operative societies".

(iv) after clause (f-2), the following shall be inserted, namely:-

"(f-3) 'nominee' means a member of a board or official of the Co-operative society appointed by the board to represent that Co-operative society in other Co-operative societies."

(v) for clause (g), the following shall be substituted, namely:-

"(g) office-bearer" means the elected President / Vice-President / Chairperson / Vice-Chairperson / secretary or treasurer, Liquidator, Administrator, Special Officer and includes a member of the board empowered by the board to exercise any power or perform any function in regard to the business of a Co-operative Society and to give directions in regard to policies affecting the business of the society."

3. Amendment of section 12.-In section 12 of the principal Act, after sub-section (4), the following shall be inserted, namely:-

"(5) If it appears to the Registrar that any amendment of the bye-laws of a Co-operative Society is necessary or desirable in the interest of such society or to give effect to the provisions of the Act made thereunder, the Registrar may, by order, may direct the Co-operative Society, to make the amendment proposed by him in such manner as may be prescribed and within such time as he may specify.

(6) If such amendment is not made by the Co-operative Society within time specified in the said order, notwithstanding anything contained in the Act, the Registrar may, after giving the Co-operative Society an opportunity of being heard, register the said amendment and forward a copy thereof to the Co-operative Society along with a certificate signed by him which shall be conclusive evidence that the amendment has been duly registered."

4. Amendment of section 16.-In section 16 of the principal Act, in sub-section (4), for the words "shall be deemed to have been refused", the words "shall be deemed to have been accepted" shall be substituted.

5. Amendment of section 17.- In section 17 of the principal Act, in sub-section (1), clause (g) shall be omitted.

6. Amendment of section 18.- In section 18 of the principal Act, in sub-section (1), after clause (d), the following proviso shall be inserted, namely:-

"Provided that the number of associate members under clause (a) in any Co-operative Society shall not exceed fifteen percent of the total membership of the society. However, in case of Co-operative Societies already having more than fifteen percent of their total membership as associate members, the excess associate members shall be either made as member, if eligible under the section 16 or shall be removed from the associate membership within six months from the date of commencement of the Karnataka Co-operative Societies (Amendment) Act, 2014."

7. Insertion of new section 18B. - After section 18A of the principal Act, the following shall be inserted, namely:-

"18-B. Cessation of directorship.-A director of a secondary Co-operative Society or a Federal Society or an Apex Society who is a representative of another co-operative society shall cease to be a director of such co-operative society forthwith if,-

(i) he ceases to be a director of the primary or secondary Co-operative Society which he represents; or

(ii) the Co-operative Society which nominated him as a representative, withdraws his nomination; or

(iii) the board of the Co-operative Society of which he is a member has been removed under section 30, or a special officer appointed under section 31; and

(iv) the Co-operative Society of which he is the representative has been liquidated."

8. Amendment of section 20.- In section 20 of the principal Act, in sub-section (2),-

(i) in clause (a-iii), the words "or election" shall be inserted at the end;

(ii) after clause (a-v), the following proviso shall be inserted at the end, namely:-

"Provided that in case of members in sub-clauses (a-iv) and (a-v), such members shall not have the right to vote at a general meeting or an election of members of the board for a period of three years."

(iii) in clause (b), for sub-clause(iv), the following shall be substituted, namely:-

"(iv) whose principal object is to advance loans and whose percentage of recovery is,-

(a) less than fifty percent of its total demand for the Co-operative year immediately preceding the Co-operative year during which the meeting or election is held or;

(b) which fails to pass on to the financing bank or the credit agency, as the case may be, fifty percent of the demand or the entire portion of the recovered amount of the demand of the financing bank or credit agency, whichever is higher, at least fifteen days before the date of the general meeting or the date of election, after a notice of not less than thirty days in this regard has been issued to that society".

9. Amendment of section 21.-In section 21 of the principal Act, for sub-section(3), the following shall be substituted, namely:-

"(3) A member once nominated by the board of a Co-operative Society under clause (a) of sub-section (2) to vote on its behalf in any meeting of any other Co-operative Society shall not be changed except by a resolution passed with substantial reasons in a board meeting by a two third majority of the members present and voting in such

meeting.However a Co-operative Society shall not nominate or appoint any member of the board to vote on behalf of it in more than two co-operative societies."

10. Amendment of section 27.-In section 27 of the principal Act,-

(i) in sub-section (1), in clause (n), in sub-clause (n-6), after the words "as irrecoverable", the words and abbreviation "as per the guidelines of Reserve Bank of India or NABARD in respect of urban Co-operative Banks or Societies in Co-operative credit structure as the case may be or in the absence of such guidelines as per the guidelines issued by the Registrar" shall be inserted;

(ii) for sub-section (4), the following shall be substituted, namely:- "(4) The quorum for a general meeting shall be as specified in the bye-laws but not less than one thousand members or ten percent of the members eligible to vote whichever is less."

11. Amendment of section 28A.-In section 28A of the principal Act,-

(i) in sub-section (2), for the words "not less than nine", the words "not less than eleven" shall be substituted; and

(ii) after sub-section (2), the following proviso shall be inserted at the end, namely:-

"Provided that, subject to the minimum and maximum number of the members of the board specified in sub-section (2) of section 28A, the bye-laws of a Co-operative Society shall provide for the composition of the board of that society to include within the permissible limits,-

(a) in case of assisted society, Government nominee as specified in sub-section (4-B) of section 28A;

(b) in case of all Co-operative Societies other than non agricultural credit Co-operative Societies, if necessary, an ex-officio member and nominee from financing or the credit agency.

The remaining members of the board shall be filled only through election subject to the provisions of section 29E";

(iii) in sub-section (3), in clause (iii), the following shall be substituted, namely:-

"(iii) Two seats to be filled by election, in favour of the persons belonging to backward classes in such manner as may be prescribed.

(iv) in sub-section (4), the words, "the board shall", the words "the board shall save as otherwise" shall be substituted.

(v) in sub-section (4-A), after the fourth proviso, the following proviso shall be inserted, namely:-

"Provided also that if the directors Co-opted to urban Co-operative Banks do not have the requisite knowledge and experience as stipulated by Reserve Bank of India, the board of such banks shall remove such persons within two months from the date of receipt of direction by the Reserve Bank of India after giving such directors an opportunity of being heard".

(vi) in sub-section (4-B), in clause(1), after the words, "Primary Agricultural Credit Co-operative Society", the following shall be inserted, namely:-

"The nominated person can vote in all meetings and elections of the co-operative society; and also can contest in all the elections of the Co-operative Society. The ex-officio members and nominee from financial or credit agency shall have the voting right but are not eligible to contest as office bearer ".

12. Amendment of section 28B.-In section 28B of the principal Act, for sub-section (1), the following shall be substituted, namely:-

"(1) The election of a board, be conducted before the expiry of the term of the board."

13. Amendment of section 28C.-In section 28C of the principal Act, in sub-section (2),-

(i) for clause (e), the following shall be substituted, namely:-

"(e) to elect the chairperson and other office bearers under the superintendence of Co-operative Election Authority."

(ii) In clause (g) after the word "employees", the words "as prescribed in the rules" shall be inserted.

14. **Insertion of new section 28D**:- After section 28C of the principal Act, the following shall be inserted, namely:-

"28D. Foreign tours by members, directors, office-bearers and employees of a cooperative societies.- The Members, directors, office-bearers and the employees of a Co-operative Society shall not undertake foreign tours at the expense of the Co-operative Society without prior approval of the Government."

15. Substitution of section 29B.-For section 29B of the principal Act, the following shall be substituted, namely:-

"29B. Resignation of member of a board or office-bearer of a Co-operative Society.- A member of the board of a Co-operative Society or an office-bearer of a Co-operative Society, may resign his membership of the board or as an office-bearer of a society, as the case may be, in writing under his hand addressed to the Chief Executive and it shall

become vacant on the expiry of fifteen days from the date of such communication unless within the said period of fifteen days such member of the board or office bearer withdraws such resignation in writing under his hand and addressed to the Chief Executive. The Chief Executive shall place the letter of resignation before the meeting of the board convened next after the communication of such letter. If the member who has resigned, is a nominated member of the society, the chief executive shall inform the nominating society immediately on receipt of the resignation letter."

16. Amendment of section 29C.-In section 29C of the principal Act,-

(i) in sub-section (1), clause (o) shall be omitted.

17. Amendment of section 29E.-In section 29E of the principal Act, after the second proviso, the following proviso shall be inserted, namely

"Provided also that, if the board fails to fill up such casual vacancy within three months of the date of occurrence, the Registrar shall fill up through nomination."

18. Amendment of section 29G.-In section 29G of the principal Act, in sub-section (1), after the second proviso, the following proviso shall be inserted, namely:-

"Provided also that, if the society fails to do so within three months, the Government or the Registrar, as the case may be, may appoint on its or on his own, a Chief executive to that Co-operative Society."

19. Amendment of section 30.- In section 30 of the principal Act,-

(i) in sub-section (2), in clause (v), after the second proviso, the following proviso shall be inserted, namely:-

"Provided also that, no member of the board superceded under sub-section (2) shall, be eligible for being elected as a member of the board of such society or any other Co-operative Society for a period of one year from the date of removal of such board and no such order of disqualification for contesting the election to the Board shall be made unless a reasonable opportunity of being heard, is given to the person against whom such order is made"; and

(ii) in sub-section (6), the following proviso shall be inserted at the end, namely:-

"Provided that no member of the board, removed shall, be eligible for being elected as a member of the board of such Bank or any other Co-operative Society for a period of one year from the date of removal of the board and no such order of disqualification shall be made unless a reasonable opportunity of being heard, is given to the persons against whom the order is made."

20. Amendment of section 31.-In section 31 of the principal Act, in sub-section (5), for the words "in accordance with its bye-laws," the words" in accordance with the Act, rules and its bye-laws" shall be substituted.

21. Amendment of section 39A.-In section 39A of the principal Act,-

(i) in sub-section (1), after the words "the extent applicable", the following shall be substituted, namely:-

"shall be held under the superintendence of Co-operative Election Authority."

(ii) in sub-section (2), for clause (b), (c) and (d), the following shall respectively be substituted, namely:-

" (b) the elections in respect of secondary Co-operative Societies
shall be held in the second stage

(c) the elections in respect of federal Co-operative Societies shall be held in the third stage

(d) the elections in respect of Apex Co-operative Societies shall be held in the fourth stage."

(iii) sub-section (3) shall be omitted with proviso.

22. Amendment of section 39AA.-In section 39AA of the principal Act,-

(i) for sub-section (2), the following shall be substituted, namely:-

"The superintendence, direction and control of the preparation of the electoral rolls for all elections to the Co-operative Societies in the State shall be vested with the Co-operative Election Authority."

(ii) for sub-section (3), the following shall be substituted, namely:-

"The Government shall appoint a person who is or has been an officer of the rank of Principal Secretary or Secretary to the State Government to be Co-operative Election Commissioner and such Co-operative Election Commissioner shall hold office for a term of five years."

(iii) for sub-section (4), the following shall be substituted, namely.-

"(4) Subject to the pleasure of the State Government, the State Government shall appoint a person who is an officer not below the rank of Additional Registrar of Co-operative Societies to be the Secretary of the Cooperative Election Authority for such period as may be prescribed."

(iv) in sub-section (6), (7) and (8), for the word "Governor" wherever they occurs, the word "Government" shall be substituted.

(v) for sub-section (10), the following shall be substituted, namely:-

"(10) The Cooperative Election Authority shall in consultation with the State Government determine the number of officers and other employees required for the discharge of the functions of the Co-operative Election Authority."

(vii) in sub-section (12), for the word "commission", the word "authority" shall be substituted.

(viii) in sub-section (15), in clause (a) and (b), for the word "commission" wherever they occurs, the word "authority" shall be substituted.

23. Amendment of section 39I.- In section 39I of the principal Act, sub-section (2) and (3) shall be omitted.

24:- Amendment of section 57:- In section 57 of the principal Act, in sub-section (2A) the following proviso shall be inserted at the end, namely:-

"Provided, urban Co-operative Banks shall contribute one percent of its net profit to the Karnataka State Co-operative Urban Banks Federation in addition to the two percent as prescribed in sub-section (2A)."

25. Amendment of section 58.- In section 58 of the principal Act, after clause (e), the following proviso shall be inserted, namely:-

"Provided that, if a Co-operative Society invest or deposit outside the area of operation of the such society prior permission shall be obtained from the Registrar."

26. Amendment of section 63.-In section 63 of the principal Act,-

(i) in sub-section (1), for the second proviso, the following shall be substituted, namely:-

"Provided further that, the National Bank shall prepare a list of auditors and auditing firms who satisfy, the prescribed qualification and experience for undertaking the audit of accounts of State Co-operative Bank and District Central Co-operative Banks."

(ii) in sub-section (2), the following provisos shall be inserted at the end, namely:-

"Provided that, if the Director of Co-operative audit is satisfied that the society has failed to appoint an auditor or an auditing firm to audit its accounts for a Co-operative year their general body and to intimate the same, the Director of Co-operative Audit,after giving an opportunity in writing to such society and after confirming that the society has not appointed an auditor or auditing firm, may appoint an auditor or an auditing firm to audit the accounts of that society from the approved panel of auditors or auditing firms and such appointed auditor or auditing firm shall be deemed as the auditor or the auditing firm for the purpose of conducting audit of that society for that particular co-operative year under consideration."

Provided, further that in case of Government auditors mentioned in the panel of auditors or auditing firms maintained by the director of Co-operative audit, they shall be mentioned by designation only and that in case of a Co-operative Society selecting a Government auditor from the empanelled list, the Co-operative Society shall intimate to the concerned deputy director of the Co-operative audit of the concerned district to cause the audit from a departmental auditor mentioning the auditors designation only.

(iii) after sub-section (13), the following shall be inserted, namely:-

"(13A)- Notwithstanding anything contained in the preceding sub-sections, the Director of Co-operative Audit subject to the approval of State Government shall have power to re-examine or reverify particular account or accounts of the audited accounts of any Co-operative Society pertaining to preceding three years and instruct the concerned auditor to rectify the lapses observed during such re-examination or reverification in the next audit report to be issued."

(iv) in sub-section (19), the following words shall be inserted at the end, namely:- "based on the working capital and turnover of the society as per the guidelines issued by Director of Co-operative audit from time to time."

(v) after sub-section (20), in the explanation,-

(a) in clause (i), the words "or a Cost Accountant within the meaning of Cost and Works Accountant Act, 1959, who shall have fair knowledge of the functioning of the Co-operative societies and an experience of atleast three years in auditing and working knowledge of Kannada language" shall be inserted at the end;

(b) in clause (ii), after the words "Chartered Accountants Act, 1949", the words "or a firm of more than one Cost Accountant within the meaning of Cost and Works Accountant Act, 1959" shall be inserted.

27. Amendment of section 66.- In section 66 of the principal Act, after the words, and figures "section 65", the words, "or otherwise" shall be inserted.

28. Amendment of section 70.-In section 70 of the principal Act,-

(i) insub-section (1), the words, "other than a dispute pertaining to the election of the board and election of office-bearers" shall be omitted.

(ii) sub-section (4) and (5) shall be omitted.

29. Amendment of section 98B.-Insection 98B of the principal Act,-

(a) after the figures, "28A", the figures and letter "28C, 28D" shall be inserted;

(b) after the figures, "30", the figures and letter "30B" shall be inserted; and

(c) for the word and figures "and 109", the word and figures "109 and 121" shall be substituted.

30. Amendment of section 98E.-In section 98E of the principal Act, clause (iii) shall be omitted.

31. Omission of section 98Y.- Section 98-Y of the principal Act, shall be omitted.

32. Amendment of section 105A.- In section 105A of the principal Act,-

(i) in sub-section (1), for the words "General Body", the word "Registrar", shall be substituted; and

(ii) for sub-section (3), the following shall be substituted, namely:-

"(3) The Registrar shall after giving a notice to the Co-operative Society and also to the person seeking admission, and giving a reasonable opportunity of being heard, pass such orders as deemed fit. The Co-operative Society shall give effect to the decision within fifteen days of the receipt of the order."

33. Amendment of section 132: In Section 132 of the Principal Act, after the words "the provisions of this Act", the words "or clarifications if any" shall be inserted.

By Order and in the name of the Governor of Karnataka

S.B. GUNJIGAVI
Secretary to Government
Department of Parliamentary Affairs

ವಿಶೇಷ ರಾಜ್ಯ ಪತ್ರಿಕೆ

ಭಾಗ– IV-A	ಬೆಂಗಳೂರು, ಶನಿವಾರ, ಸೆಪ್ಟೆಂಬರ್ ೬, ೨೦೧೪ (ಭಾದ್ರಪದ ೧೫, ಶಕ ವರ್ಷ ೧೯೩೬)	ನಂ. ೫೫೮
Part– IV-A	**Bangalore, Saturday, September 6, 2014 (Bhadrapada 15, Shaka Varsha 1936)**	**No. 558**

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಂವ್ಯಶಾಇ 21 ಶಾಸನ 2014, ಬೆಂಗಳೂರು, ದಿನಾಂಕ: 06.09.2014

ಶ್ರೀ ಮಲೈ ಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2014 ಕ್ಕೆ 2014ರ ಸೆಪ್ಟೆಂಬರ್ ತಿಂಗಳ ಎರಡನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2014ರ ಕರ್ನಾಟಕ ಅಧಿನಿಯಮ ಸಂಖ್ಯೆ: 36 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

2014ರ ಕರ್ನಾಟಕ ಅಧಿನಿಯಮ ಸಂಖ್ಯೆ 36

(2014ರ ಸೆಪ್ಟೆಂಬರ್ ತಿಂಗಳ ಆರನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2014

(2014ರ ಸೆಪ್ಟೆಂಬರ್ ತಿಂಗಳ ಎರಡನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2013ನ್ನು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2013ನ್ನು (2013ರ ಕರ್ನಾಟಕ ಅಧಿನಿಯಮ, 37) ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ:

ಇದು, ಭಾರತ ಗಣರಾಜ್ಯದ ಅರವತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2014 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 3ನೇ ಪ್ರಕರಣದ ತಿದ್ದುಪಡಿ.– ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ 2013ರ (2013ರ ಕರ್ನಾಟಕ ಅಧಿನಿಯಮ, 37) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 3ನೇ ಪ್ರಕರಣದಲ್ಲಿ,–

(i) (2)ನೇ ಉಪಪ್ರಕರಣದಲ್ಲಿ, "ಮಲೈ ಮಹದೇಶ್ವರ ಬೆಟ್ಟಗಳಲ್ಲಿ" ಎಂಬ ಪದಗಳಿಗೆ "ಮಲೈ ಮಹದೇಶ್ವರ ಬೆಟ್ಟದಲ್ಲಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) (4)ನೇ ಉಪಪ್ರಕರಣದಲ್ಲಿ,–

(ಎ) (ಸಿ) ಖಂಡದಲ್ಲಿ, "ಜಿಲ್ಲೆಯ ಜಿಲ್ಲಾ ಉಸ್ತುವಾರಿ ಸಚಿವರು" ಎಂಬ ಪದಗಳ ತರುವಾಯ "ಉಪಾಧ್ಯಕ್ಷರಾಗಿರತಕ್ಕದ್ದು" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಬಿ) (ಎಫ್) ಖಂಡಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಎಫ್) ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರದ ಐತಿಹಾಸಿಕ ಹಿನ್ನೆಲೆ ಮತ್ತು ಸ್ಥಳಪುರಾಣದ ಬಗ್ಗೆ ಹೆಚ್ಚಿನ ಪರಿಚಯವಿರುವ ಅತಿ ಗಣ್ಯ ವ್ಯಕ್ತಿಗಳ ಪೈಕಿ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಐದಕ್ಕೆ ಮೀರದ ಸದಸ್ಯರು, ಅವರಲ್ಲಿ ಕನಿಷ್ಠ ಒಬ್ಬರು ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಕ್ಕೆ ಸೇರಿದವರಾಗಿರತಕ್ಕದ್ದು ಮತ್ತು ಒಬ್ಬರು ಮಹಿಳೆಯಾಗಿರತಕ್ಕದ್ದು."

(ಸಿ) (ಎಚ್) ಖಂಡದ ಕೊನೆಯಲ್ಲಿ "ಅಥವಾ ಅವರ ನಾಮನಿರ್ದೇಶಿತರು" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಡಿ) (ಜೆ) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಜೆ) ಸರ್ಕಾರದ ಕಾರ್ಯದರ್ಶಿ, ಕಂದಾಯ ಇಲಾಖೆ (ಮುಜರಾಯಿ) ಅಥವಾ ಅವರ ಪ್ರತಿನಿಧಿ;

(ಜೆ–1) ಆಯುಕ್ತರು, ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ ಇಲಾಖೆ, ಬೆಂಗಳೂರು;

(ಜೆ–2) ಪ್ರಧಾನ ಅರ್ಚಕರು, ಶ್ರೀ ಮಲೈ ಮಹದೇಶ್ವರಸ್ವಾಮಿ ದೇವಸ್ಥಾನ;"

3. 6ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 6ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ (ಸಿ) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಸಿ) ಪ್ರಾಧಿಕಾರಕ್ಕೆ ಮಾಹಿತಿಯನ್ನು ನೀಡದೆ ಪ್ರಾಧಿಕಾರದ ಮೂರು ನಿರಂತರ ಸಭೆಗಳಿಗೆ ಗೈರುಹಾಜರಾದರೆ:

ಪರಂತು, ಈ ಖಂಡವು ಪದನಿಮಿತ್ತ ಸದಸ್ಯರಿಗೆ ಅನ್ವಯವಾಗತಕ್ಕದ್ದಲ್ಲ, ಅಥವಾ"

4. 8ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 8ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ,–

(i) (ಎ) ಖಂಡದ ಪರಂತುಕಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"ಪರಂತು, ಹತ್ತು ಲಕ್ಷ ರೂಪಾಯಿಗಳ ಅಥವಾ ಅದಕ್ಕೂ ಹೆಚ್ಚಿನ ವೆಚ್ಚವನ್ನೊಳಗೊಂಡ ಪ್ರತಿಯೊಂದು ಕರಾರಿನ ಪ್ರತಿಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು." ಮತ್ತು

(ii) (ಬಿ) ಖಂಡದಲ್ಲಿ, "ಅಧಿಕಾರವನ್ನು ಹೊಂದಿರತಕ್ಕದ್ದು" ಎಂಬ ಪದಗಳ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"ಈ ಬಗ್ಗೆ ಒಂದು ಅನುಸರಣಾ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು."

5. 10ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 10ನೇ ಪ್ರಕರಣದಲ್ಲಿ,–

(i) (1)ನೇ ಉಪಪ್ರಕರಣಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(1) ರಾಜ್ಯ ಸರ್ಕಾರವು, ಕರ್ನಾಟಕ ಆಡಳಿತ ಸೇವೆಗಳ ಹಿರಿಯ ಶ್ರೇಣಿಯ ಅಧಿಕಾರಿಯನ್ನು ಪ್ರಾಧಿಕಾರದ ಕಾರ್ಯದರ್ಶಿಯಾಗಿ ಮತ್ತು ಧರ್ಮಾದಾಯ ಇಲಾಖೆಯ ಕಾರ್ಯನಿರ್ವಹಣಾ ಅಧಿಕಾರಿಯನ್ನು ಪ್ರಾಧಿಕಾರದ ಉಪಕಾರ್ಯದರ್ಶಿಯಾಗಿ ನೇಮಿಸತಕ್ಕದ್ದು."

(ii) (2)ನೇ ಉಪಪ್ರಕರಣದಲ್ಲಿ, "ಕಾರ್ಯದರ್ಶಿಯು" ಎಂಬ ಪದದ ತರುವಾಯ "ಮತ್ತು ಇತರ ಅಧಿಕಾರಿಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು.

6. 12ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 12ನೇ ಪ್ರಕರಣದ, (1)ನೇ ಉಪಪ್ರಕರಣದ ಮೊದಲನೇ ಪರಂತುಕಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"ಪರಂತು, ರಾಜ್ಯ ಸರ್ಕಾರವು, ಈ ಅಧಿನಿಯಮದಡಿಯಲ್ಲಿ ನಿಯಮಗಳನ್ನು ರಚಿಸುವವರೆಗೆ, ಶ್ರೀ ಮಲೈ ಮಹದೇಶ್ವರ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಶ್ರೀ ಮಲೈ ಮಹದೇಶ್ವರಸ್ವಾಮಿ ದೇವಸ್ಥಾನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅರ್ಚಕರನ್ನು ಒಳಗೊಂಡಂತೆ ನೌಕರರ ನೇಮಕಾತಿ ವಿಧಾನ ಮತ್ತು ಸೇವಾ ಷರತ್ತುಗಳು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997ರ (2001ರ ಕರ್ನಾಟಕ ಅಧಿನಿಯಮ 33) ಮತ್ತು ಅದರಡಿಯಲ್ಲಿ ಮಾಡಲಾದ ನಿಯಮಗಳ ಉಪಬಂಧಗಳ ನಿಯಂತ್ರಣದಲ್ಲಿಯೇ ಮುಂದುವರೆಯತಕ್ಕದ್ದು."

7. 14ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 14ನೇ ಪ್ರಕರಣದಲ್ಲಿ,–

(i) (1)ನೇ ಉಪಪ್ರಕರಣದ ಪರಂತುಕದಲ್ಲಿ "ಎರಡು" ಎಂಬ ಪದಕ್ಕೆ "ನಾಲ್ಕು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ii) (2)ನೇ ಉಪಪ್ರಕರಣದಲ್ಲಿ "ಉಪಾಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು", ಎಂಬ ಪದಗಳಿಗೆ "ಸಭೆಯಲ್ಲಿ ಇಬ್ಬರೂ ಉಪಾಧ್ಯಕ್ಷರು ಉಪಸ್ಥಿತರಿದ್ದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

8. 18ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 18ನೇ ಪ್ರಕರಣದಲ್ಲಿ,–

(i) (1)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(1) ಮಲೈ ಮಹದೇಶ್ವರಸ್ವಾಮಿ ದೇವಸ್ಥಾನವನ್ನು ನಿಯಂತ್ರಿಸುವ ಯಾವುದೇ ಪದ್ಧತಿ, ರೂಢಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳಲ್ಲಿ ಅಥವಾ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997ರ (2001ರ

ಕರ್ನಾಟಕ ಅಧಿನಿಯಮ 33) ಉಪಬಂಧಗಳಲ್ಲಿ ಏನೇ ಒಳಗೊಂಡಿದ್ದರೂ, ದೇವಸ್ಥಾನದ ಒಡೆತನ, ಆಡಳಿತ ಮತ್ತು ಆಭರಣಗಳು ಮತ್ತು ಹೊಣೆಗಾರಿಕೆಗಳನ್ನೂ ಒಳಗೊಂಡಂತೆ ಚರ ಮತ್ತು ಸ್ಥಿರ ಸ್ವತ್ತುಗಳ ಸಂಪೂರ್ಣ ನಿರ್ವಹಣೆಯು, ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2014ರ ಪ್ರಾರಂಭದ ದಿನಾಂಕದಿಂದ ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು ಮತ್ತು ತದನಂತರ ಪ್ರಾಧಿಕಾರಕ್ಕೆ ವರ್ಗಾಯಿಸತಕ್ಕದ್ದು."

(ii) (2)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(2) 12ನೇ ಪ್ರಕರಣದ (1)ನೇ ಉಪಪ್ರಕರಣಕ್ಕೆ ಒಳಪಟ್ಟು ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2014ರ ಪ್ರಾರಂಭದ ದಿನಾಂಕದಂದು ಮತ್ತು ಅಂದಿನಿಂದ ದೇವಸ್ಥಾನದ ನೌಕರರ ನಿರ್ವಹಣೆಯು ಪ್ರಾಧಿಕಾರದಲ್ಲಿ ನಿಹಿತವಾಗಿರತಕ್ಕದ್ದು."

9. 19ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 19ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ "ಅನುಮೋದನೆಗಾಗಿ" ಎಂಬ ಪದಗಳಿಗೆ "ಮಾಹಿತಿಗಾಗಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

10. 24ನೇ ಪ್ರಕರಣದ ತಿದ್ದುಪಡಿ.–ಮೂಲ ಅಧಿನಿಯಮದ 24ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ, (iii) ನೇ ಖಂಡದ ಪರಂತುಕಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"ಪರಂತು, ದೇಣಿಗೆಗಳು, ಕಾಣಿಕೆಗಳು, ಸೇವಾ ಶುಲ್ಕಗಳು ಮತ್ತು ಹುಂಡಿಯಲ್ಲಿ ದೇವರಿಗಾಗಿ ಸಲ್ಲಿಸಿದ ಇತರ ನೀಡಿಕೆಗಳನ್ನು ಪ್ರಾಧಿಕಾರದ ನಿಧಿಗೆ ಜಮಾ ಮಾಡತಕ್ಕದ್ದು ಮತ್ತು ಅದರಲ್ಲಿ ದೇವಸ್ಥಾನದ ನಿವ್ವಳ ಆದಾಯವನ್ನು ಪ್ರಾಧಿಕಾರವು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997ರ (2001ರ ಕರ್ನಾಟಕ ಅಧಿನಿಯಮ 33) 17ನೇ ಪ್ರಕರಣದ ಅಡಿಯಲ್ಲಿ ಸೃಜಿಸಲಾದ ಸಾಮಾನ್ಯ ಸಂಗ್ರಹಣಾ ನಿಧಿಗೆ
ಆ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಅಂಥ ದರದಲ್ಲಿ ಕೊಡುಗೆ ನೀಡತಕ್ಕದ್ದು."

11. 29ನೇ ಪ್ರಕರಣದ ತಿದ್ದುಪಡಿ.–ಮೂಲ ಅಧಿನಿಯಮದ 29ನೇ ಪ್ರಕರಣದಲ್ಲಿ, (2)ನೇ ಉಪಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(3) ರಾಜ್ಯ ಸರ್ಕಾರವು, ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿ ಮತ್ತು ವಾರ್ಷಿಕ ವರದಿಯನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಇಡತಕ್ಕದ್ದು."

12. 38ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 38ನೇ ಪ್ರಕರಣದಲ್ಲಿ "38ನೇ ಪ್ರಕರಣದ ಅಡಿಯಲ್ಲಿ" ಎಂಬ ಪದಗಳಿಗೆ "37ನೇ ಪ್ರಕರಣದ ಅಡಿಯಲ್ಲಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಬಿ. ಗುಂಜಿಗಾವಿ
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳ ಇಲಾಖೆ

ವಿಶೇಷ ರಾಜ್ಯ ಪತ್ರಿಕೆ

ಭಾಗ– IV-A	ಬೆಂಗಳೂರು, ಶನಿವಾರ, ಸೆಪ್ಟೆಂಬರ್ ೬, ೨೦೧೪ (ಭಾದ್ರಪದ ೧೫, ಶಕ ವರ್ಷ ೧೯೩೬)	ನಂ. ೫೫೯
Part– IV-A	**Bangalore, Saturday, September 6, 2014 (Bhadrapada 15, Shaka Varsha 1936)**	**No. 559**

PERSONNEL AND ADMINISTRATIVE REFORMS SECRETARIAT

NOTIFICATION

No. DPAR 15 PRB 2014, Bangalore, Dated: 05th September 2014

Shri Vajubhai Rudabhai Vala, having been appointed by the President of India, as the Governor of Karnataka, took the oath of office on 1st September, 2014.

By Order and in the name of the President of India,

KAUSHIK MUKHERJEE
Chief Secretary to Government

R.N.I. No. KARBIL/2001/47147 POSTAL REGN. No. RNP/KA/BGS/2202/2014-16
Licensed to post without prepayment WPP No. 297

ವಿಶೇಷ ರಾಜ್ಯ ಪತ್ರಿಕೆ

ಭಾಗ– IV-A	ಬೆಂಗಳೂರು, ಮಂಗಳವಾರ, ಸೆಪ್ಟೆಂಬರ್ ೯, ೨೦೧೪ (ಭಾದ್ರಪದ ೧೮, ಶಕ ವರ್ಷ ೧೯೩೬)	ನಂ. ೫೬೦
Part– IV-A	Bangalore, Tuesday, September 9, 2014 (Bhadrapada 18, Shaka Varsha 1936)	No. 560

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಂವ್ಯಶಾಇ 66 ಶಾಸನ 2012, ಬೆಂಗಳೂರು, ದಿನಾಂಕ: 09.09.2014

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ, 2014ಕ್ಕೆ 2014ರ ಸೆಪ್ಟೆಂಬರ್ ತಿಂಗಳ ಎರಡನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2014ರ ಕರ್ನಾಟಕ ಅಧಿನಿಯಮ ಸಂಖ್ಯೆ:37 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

2014ರ ಕರ್ನಾಟಕ ಅಧಿನಿಯಮ ಸಂಖ್ಯೆ 37

(2014ರ ಸೆಪ್ಟೆಂಬರ್ ತಿಂಗಳ ಒಂಭತ್ತನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ (ತಿದ್ದುಪಡಿ) ಅಧಿನಿಯಮ, 2014

(2014ರ ಸೆಪ್ಟೆಂಬರ್ ತಿಂಗಳ ಎರಡನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ, 2009ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ, 2009ನ್ನು (2010ರ ಕರ್ನಾಟಕ ಅಧಿನಿಯಮ 10) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಅರವತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ (ತಿದ್ದುಪಡಿ) ಅಧಿನಿಯಮ, 2014 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 27ನೇ ಪ್ರಕರಣದ ತಿದ್ದುಪಡಿ.– ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ, 2009ರ (2010ರ ಕರ್ನಾಟಕ ಅಧಿನಿಯಮ 10) 27ನೇ ಪ್ರಕರಣದ (9)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(9) ಕುಲಪತಿಯವರನ್ನು,–

(i) ಈ ಅಧಿನಿಯಮದ ಉಪಬಂಧಗಳನ್ನು ನಿರ್ವಹಿಸುವಲ್ಲಿ ಉದ್ದೇಶಪೂರ್ವಕವಾಗಿ ಲೋಪವೆಸಗಿರುವ ಅಥವಾ ನಿರಾಕರಿಸಿರುವ ಆಧಾರದ ಮೇಲೆ; ಅಥವಾ

(ii) ಆತನಲ್ಲಿ ನಿಹಿತವಾದ ಅಧಿಕಾರಗಳ ದುರುಪಯೋಗಕ್ಕಾಗಿ; ಅಥವಾ

(iii) (10)ನೇ ಉಪಪ್ರಕರಣದ ಅಡಿಯಲ್ಲಿ ತಾನು ಆದೇಶ ಮಾಡಿದ ವಿಚಾರಣಾ ಪ್ರಾಧಿಕಾರದ ವರದಿಯನ್ನು ಪರಿಗಣಿಸಿ, ರಾಜ್ಯ ಸರ್ಕಾರವು ನೀಡಿದ ಸೂಚನೆಯ ಮೇರೆಗೆ,

– ಕುಲಾಧಿಪತಿಯವರು ಹೊರಡಿಸಿದ ಆದೇಶದ ಮೂಲಕವಾಗಿ ಹೊರತು, ಅವರ ಸ್ಥಾನದಿಂದ ತೆಗೆಯತಕ್ಕದ್ದಲ್ಲ.

(10) ಈ ಪ್ರಕರಣದ ಅಡಿಯಲ್ಲಿ ವಿಚಾರಣೆಯನ್ನು ನಡೆಸುವ ಉದ್ದೇಶಕ್ಕಾಗಿ, ರಾಜ್ಯ ಸರ್ಕಾರವು, ಉಚ್ಚ ನ್ಯಾಯಾಲಯದ ಅಥವಾ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾಗಿರುವ ಅಥವಾ ನ್ಯಾಯಮೂರ್ತಿಗಳಾಗಿದ್ದ ವ್ಯಕ್ತಿಯೊಬ್ಬರನ್ನು ವಿಚಾರಣಾ ಪ್ರಾಧಿಕಾರಿಯನ್ನಾಗಿ ನೇಮಕ ಮಾಡತಕ್ಕದ್ದು. ವಿಚಾರಣಾ ಪ್ರಾಧಿಕಾರಿಯು, ಕುಲಪತಿಯವರಿಗೆ ಮನವಿಯನ್ನು ಮಾಡಲು ಒಂದು ಅವಕಾಶವನ್ನು ನೀಡಿದ ತರುವಾಯ ವಿಚಾರಣೆಯನ್ನು ನಡೆಸತಕ್ಕದ್ದು ಮತ್ತು ವಿಧಿಸಬೇಕಾದ ದಂಡವು ಯಾವುದಾದರೂ ಇದ್ದಲ್ಲಿ, ಅದನ್ನೂ ಸೇರಿಸಿ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ರಾಜ್ಯ ಸರ್ಕಾರಕ್ಕೆ ಒಂದು ವರದಿಯನ್ನು ಸಲ್ಲಿಸತಕ್ಕದ್ದು ಹಾಗೂ ರಾಜ್ಯ ಸರ್ಕಾರವು, ಸದರಿ ವರದಿಯನ್ನು ಪರಿಗಣಿಸಿ ಕುಲಾಧಿಪತಿಯವರಿಗೆ ಸೂಚನೆ ನೀಡತಕ್ಕದ್ದು. ಕುಲಾಧಿಪತಿಯವರು, ಕುಲಪತಿಯವರ ಪದಾವಧಿಯೊಳಗೆ ಅಥವಾ ಆರು ತಿಂಗಳೊಳಗೆ, ಇವೆರೆಡರಲ್ಲಿ ಯಾವುದು ಮೊದಲೋ ಆ ಅವಧಿಯೊಳಗೆ, ಅಂಥ ಸೂಚನೆಯ ಅನುಸಾರವಾಗಿ ಕ್ರಮ ತೆಗೆದುಕೊಳ್ಳತಕ್ಕದ್ದು."

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ. ದ್ವಾರಕನಾಥ್ ಬಾಬು
ಸರ್ಕಾರದ ವಿಶೇಷ ಕಾರ್ಯದರ್ಶಿ (ಶಾಸನ ರಚನೆ)
ಸಂಸದೀಯ ವ್ಯವಹಾರಗಳ ಇಲಾಖೆ

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59